
ಅಚಲ



* ಮುಂಬರುವ ಸರ್ವಾಧಿಕಾರಿಗೆ
* ಹಿತೈಷಿಣಿ
* ಚಿತ್ರಾಂಗದ
* ಅರ್ಚನಾ ಶರ್ಮಾ
* ವಿಜ್ಞಾನ ಮತ್ತು ಮಹಿಳೆ
* ಮೇರಿ ಕ್ಯೂರಿ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರದ ದ್ವೈಮಾಸಿಕ

ಫೆಬ್ರುವರಿ 5, 1987 ಬೆಲೆ : ರೂ. 1-50

ಪ್ರಿಯ ಸಂಗಾತಿ,

ಹೊಸ ವರ್ಷದ ಶುಭಾಶಯಗಳು. ವರ್ಷದ ಆರಂಭದಲ್ಲಿಯೇ ನಗರದಲ್ಲಿ 74ನೇ ಅಖಿಲ ಭಾರತ ವಿಜ್ಞಾನ ಕಾಂಗ್ರೆಸ್ ನಡೆದಿದೆ. ಇದರ ಅಧ್ಯಕ್ಷತೆ ವಹಿಸಿದ್ದವರು ಕಲ್ಕತ್ತೆಯ ವಿಜ್ಞಾನಿ ಅರ್ಚನಾ ಶರ್ಮಾರವರು. ವಿಜ್ಞಾನ ಕ್ಷೇತ್ರದಲ್ಲಿ ಕೆಲವೊಂದು ಅಪವಾದಗಳನ್ನು ಬಿಟ್ಟರೆ ಅಂತಹ ಹೇಳಿಕೊಳ್ಳುವಂತಹ ಸಾಧನೆಯನ್ನು ಮಹಿಳೆಯು ಸಾಧಿಸಿಲ್ಲದಿರುವಂತಹ ಸಂದರ್ಭದಲ್ಲಿ ಮಹಿಳಾ ವಿಜ್ಞಾನಿಯೊಬ್ಬರು ವಿಜ್ಞಾನ ಕಾಂಗ್ರೆಸ್‌ನ ಅಧ್ಯಕ್ಷತೆ ವಹಿಸಿರುವುದು ಹೆಮ್ಮೆಯ ಸಂಗತಿ.

ಬುದ್ಧಿಜೀವಿಯಾದ ಮಾನವನ ಯುಗ ಸಾಗಿ ಬಂದಿರುವುದಕ್ಕೆ ಒಂದೆರಡು ಮಿಲಿಯನ್ ವರ್ಷಗಳ ದೀರ್ಘ ಇತಿಹಾಸವೇ ಇದೆ. ಪ್ರಾಣಿಗಳಿಂದ ತನ್ನನ್ನು ಸಂರಕ್ಷಿಸಿಕೊಳ್ಳಲು ಆಯುಧಗಳನ್ನು ರೂಪಿಸಿಕೊಂಡ ಮಾನವ ಬೆಂಕಿಯನ್ನು ಕಂಡುಹಿಡಿದ, ಬೇಯಿಸಿದ ಮಾಂಸ ತಿನ್ನಲು ಕಲಿತ, ನಂತರ ಕೃಷಿಯನ್ನು ಕಂಡು ಹಿಡಿದ. ಪ್ರಕೃತಿಯ ವಿವಿಧ ಮುಖಗಳಿಂದ ನೀರು, ಗಾಳಿ, ನೆಲ, ಸೂರ್ಯನನ್ನು ತನ್ನ ಅಗತ್ಯಗಳಿಗನುಗುಣವಾಗಿ ಶೋಧಿಸಿದ. ಇತಿಹಾಸದ ವಿವಿಧ ಹಂತಗಳಲ್ಲಿ ಮಾನವನ ಸಾಧನೆ ಹೀಗೆ ಹಲವಾರು. ಈ ಸಾಧನೆಯ ಪಟ್ಟಿಗೆ ಮಹಿಳೆಯ ಕೊಡುಗೆ ಅತ್ಯಲ್ಪ. ಅದಕ್ಕೆ ಅವಳದೇ ಆದ ಸಾಂಸ್ಕೃತಿಕ ಕಾರಣಗಳಿವೆ. ಮುಂಬರುವ ದಿನಗಳಲ್ಲಿ ಈ ಅಡೆತಡೆಗಳನ್ನು ನಿವಾರಿಸಿಕೊಂಡು ವೈಜ್ಞಾನಿಕ ಸಂಶೋಧನೆಗಳಲ್ಲಿ ತೊಡಗುವ ಸಂಕಲ್ಪ ಮತ್ತು ಪ್ರಯತ್ನ ಅವಳದಾಗಬೇಕಾಗಿದೆ.

ಪ್ರಕೃತಿಯ ರಹಸ್ಯವನ್ನು ಬೇಧಿಸುವುದು, ತನ್ನ ಪರಿಸರದ ಬಗ್ಗೆ ಹೆಚ್ಚು ತಿಳುವಳಿಕೆ ಪಡೆಯುವುದು ಮಾನವನಿಗೆ ಹೆಚ್ಚಿನ ಸ್ವಾತಂತ್ರ್ಯಕ್ಕೆ ದಾರಿಮಾಡಿಕೊಡುತ್ತದೆ. ಅಂತೆಯೇ ಸ್ವಾತಂತ್ರ್ಯಾಕಾಂಕ್ಷಿಯಾದ ಮಹಿಳೆ ತನ್ನ ದೈಹಿಕ ಪ್ರಕೃತಿಯ ಬಗೆಗೆ, ಪರಿಸರದ ಆಗುಹೋಗುಗಳ ಬಗೆಗೆ ಹೆಚ್ಚಿನ ತಿಳುವಳಿಕೆ ಪಡೆಯುವುದು, ವೈಜ್ಞಾನಿಕ ಚಿಂತನೆ ನಡೆಸುವುದು ಸ್ವಾತಂತ್ರ್ಯದ ದಿಸೆಯತ್ತ ಇಡುವ ಮೊದಲ ಹೆಜ್ಜೆ. ಅಜ್ಞಾನದ ಅಂಧಕಾರದಲ್ಲಿ ಮುಳುಗಿರುವ ನಮ್ಮ ಬಹಳಷ್ಟು ಮಹಿಳೆಯರು (ಪುರುಷರೂ ಇಲ್ಲವೆಂದಲ್ಲ !) ತಮ್ಮ ದಿನನಿತ್ಯದ ಆಗುಹೋಗುಗಳ ಬಗ್ಗೆ ಹೊಂದಿರುವ ಮೂಢನಂಬಿಕೆಗಳು ಮತ್ತು ಸುತ್ತಣ ಸಮಸ್ಯೆಗಳ ಪರಿಹಾರಕ್ಕಾಗಿ ಅಮೂರ್ತ, ಅಗೋಚರ ಶಕ್ತಿಗಳನ್ನು ಆಶ್ರಯಿಸುವುದನ್ನು ಗಮನಿಸಿದಾಗ ವೈಜ್ಞಾನಿಕ ಚಿಂತನೆಯ ಅನಿವಾರ್ಯತೆಯ ಅರಿವು ಆಗದೇ ಇರದು.

ವಿಜ್ಞಾನ ಕ್ಷೇತ್ರದಲ್ಲಿನ ಪ್ರಗತಿ ಮತ್ತು ವೈಜ್ಞಾನಿಕ ಸಂಶೋಧನೆಗಳು ಮಾನವನ ಒಳಿತಿಗೆ, ಸುಖಮಯ ಜೀವನಕ್ಕೆ ಕಾರಣವಾಗಿದೆ. ವೈಜ್ಞಾನಿಕ ಸಂಶೋಧನೆಗಳು ಹೆಣ್ಣಿನ ಗೃಹಕೃತ್ಯದಲ್ಲಿ ಮಹತ್ತರ ಕ್ರಾಂತಿ ನಡೆಸಿ ಅವಳ ಶ್ರಮವನ್ನು ಹಗುರ ಮಾಡಿದೆ; ಅವಳ ವೇಳೆ ಮತ್ತು ಶ್ರಮಕ್ಕೆ ಹೊಸ ಆಯಾಮವನ್ನು ಒದಗಿಸಿದೆ. ಸಂತಾನ ನಿಯಂತ್ರಣದ ಸಾಧನಗಳು ಅವಳ ಸ್ವಾತಂತ್ರ್ಯವನ್ನು ಹೆಚ್ಚಿಸಿವೆ. ಆದರೆ ಅಷ್ಟೇ ತ್ವರಿತಗತಿಯಲ್ಲಿ ಈ ವೈಜ್ಞಾನಿಕ ಸಂಶೋಧನೆಯ ಫಲಗಳು ದುರುಪಯೋಗವಾಗಿ ಹೆಣ್ಣಿನ ಅಸ್ತಿತ್ವಕ್ಕೆ ಸವಾಲಾಗಿದೆ. ವಂಶವಾಹಿನಿಯ ಸಂಶೋಧನೆ, ಪ್ರನಾಳ ಶಿಶುವಿನ ಪ್ರಯೋಗ ಮುಂತಾದ ಉಪಯುಕ್ತಕಾರಿ ಸಂಶೋಧನೆಯ ಜೊತೆಯಲ್ಲಿಯೇ ಆಮ್ನಿಯೋ ಸಿಂಟೆಸಿಸ್ ವಿಧಾನವನ್ನು ಭ್ರೂಣದ ಲಿಂಗ ತಿಳಿಯುವ ತಂತ್ರಕ್ಕೆ ಬಳಸಲಾಗಿ ಹೆಣ್ಣು ಭ್ರೂಣ ಹತ್ಯೆಗೆ ಎಡೆ ಮಾಡಿಕೊಟ್ಟಿದೆ. ವಿಜ್ಞಾನದ ಇಂತಹ ದುರುಪಯೋಗದ ವಿರುದ್ಧ ಪ್ರಬಲ ಹೋರಾಟ, ಸಂಘಟಿತ ಚಳುವಳಿ ಅತ್ಯಗತ್ಯ.

ಸಂಪುಟ 1 ಸಂಚಿಕೆ 1

'ಅಚಲ' ಪತ್ರಿಕೆಯನ್ನು ಪಡೆಯ ಬಯಸುವವರು ದಯವಿಟ್ಟು ಕೆಳಗಿನ ವಿಳಾಸಕ್ಕೆ ಹತ್ತು ರೂಪಾಯಿಗಳನ್ನು ಎಂ. ಓ. ಡ್ರಾಫ್ಟ್ ಮೂಲಕ ಕಳುಹಿಸಿ.
ಎಂ. ಓ. ಮೂಲಕ ಚಂದಾ ಹಣ ಕಳುಹಿಸುವವರು ಕೂಪನ್‌ನಲ್ಲಿ ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು : ಚಂದಾದಾರರು ತಮ್ಮ ವಿಳಾಸ ಬದಲಾದರೆ ಕೂಡಲೇ ಕಾರ್ಡಿನಲ್ಲಿ ಬರೆದು ತಿಳಿಸಬೇಕು.

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
221, 4ನೇ ಮೈನ್, ವೈಯ್ಯಾಳಿಕಾವಲ್
ಬೆಂಗಳೂರು-560 003.

ಸಂಪಾದಕ ಮಂಡಳಿ

ಎನ್. ಗಾಯತ್ರಿ, ಭಾರತಿ, ಧನಲಕ್ಷ್ಮಿ, ನೇಮಿಚಂದ್ರ.

ಕಲೆ : **ಧನಲಕ್ಷ್ಮಿ**
ಪ್ರಸಾರ ವ್ಯವಸ್ಥೆ : **ಎನ್. ಶಾಂತಾ**

ಚಂದಾ ವಿವರ

ವಾರ್ಷಿಕ ಚಂದಾ :	**10ರೂ.**
ಬಿಡಿ ಪ್ರತಿ :	**1-50ರೂ.**
ವಿಶೇಷ ಪ್ರತಿ :	**2-50ರೂ.**
ಆಜೀವ ಚಂದಾ :	**100ರೂ.**

Printed at PRINTSWELL 78 2nd Main Road, Nagappa Block, Sriramapuram Bangalore-21 and published by Dr. G. Ramakrishna on behalf of Jagruthi Mahila Adhyana Kendra 221, IV Main, Vyalikaval, BANGALORE-3

Editor : N. GAYATHRI

ನಿಮ್ಮೆಲ್ಲರಿಗೂ ಹೊಸ ವರ್ಷದ ಶುಭಾಶಯಗಳು

ಬದಲಾದ ಹೆಸರುಗಳೊಂದಿಗೆ ಈ ಪತ್ರಿಕೆ ಮೂರನೇ ವರ್ಷಕ್ಕೆ ಕಾಲಿಡುತ್ತಿದೆ. ಈ ಪತ್ರಿಕೆಯನ್ನು ಹೀಗೆ ಬೆಳೆಸಿಕೊಂಡು ಹೋಗಲು, ಇನ್ನಷ್ಟು ಸತ್ವಯುತವಾಗಿಸಲು ನಿಮ್ಮೆಲ್ಲರ ಸಹಕಾರ ತೀರ ಅಗತ್ಯ. ಹೆಚ್ಚು ಚಂದಾದಾರರನ್ನು ಮಾಡಿಸುವ ಮೂಲಕ ಮತ್ತು ಜಾಹೀರಾತುಗಳನ್ನು ದೊರಕಿಸಿಕೊಡುವುದರ ಮೂಲಕ ಪತ್ರಿಕೆಯ ಆರ್ಥಿಕ ಸ್ಥಿತಿಯನ್ನು ದಯವಿಟ್ಟು ಉತ್ತಮಪಡಿಸಿ ಪತ್ರಿಕೆ ಹೆಚ್ಚು ಉತ್ತಮವಾಗಿ ಬರಲು ಲೇಖನಗಳು ಹಾಗೂ ಪ್ರತಿಕ್ರಿಯೆಗಳು ಬಹಳ ಅವಶ್ಯಕವೆಂದು ಬೇರೆ ಹೇಳಬೇಕಾಗಿಲ್ಲ. ಇದಿಲ್ಲದಿದ್ದರೆ ಚರ್ಚೆ ಬೆಳೆಯುವುದು ಅಶಕ್ಯ ಮತ್ತು ನಿರೀಕ್ಷಿಸಿದ ಬೆಳವಣಿಗೆ ಅಸಂಭವ. ಆದ್ದರಿಂದ ಈ ಕ್ರಿಯೆಯಲ್ಲಿ ನೀವೆಲ್ಲಾ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂಬುದು ನಮ್ಮ ಅಪೇಕ್ಷೆ.

'ಅಚಲ'ದ ಮೊದಲ ಸಂಚಿಕೆಯಿಂದ ಚಂದಾದಾರರಾಗಿರುವವರ ಚಂದಾಹಣ ಮುಗಿದಿದೆ. ದಯವಿಟ್ಟು ಚಂದಾ ನವೀಕರಿಸಿ. ಪತ್ರಿಕೆಯ ಆರ್ಥಿಕ ಸ್ಥಿತಿಯನ್ನು ಬಲಗೊಳಿಸಲು 100 ರೂ.ಗಳನ್ನು ಕೊಟ್ಟು ಆಜೀವ ಚಂದಾದಾರರಾಗಿ. ಚಂದಾ ಹಣವನ್ನು ಚೆಕ್ ಅಥವಾ ಮನಿ ಆರ್ಡರ್ ಮುಖೇನ ಕಳಿಸಬಹುದು. ಹಣ ಕಳುಹಿಸುವವರು ಬ್ಯಾಂಕ್ ಕಮಿಷನ್‌ಗಾಗಿ ಎರಡು ರೂಪಾಯಿಗಳನ್ನು ಸೇರಿಸಿ ಕಳುಹಿಸಬೇಕೆಂದು ವಿನಂತಿ. ●

ಸಂವಾದ

ಮೀಸಲಾತಿ ಮತ್ತು ಮಹಿಳಾ ಪ್ರಗತಿ

ಮಹಿಳೆಯರಿಗೆ ಉದ್ಯೋಗ, ರಾಜಕೀಯದಲ್ಲಿ ಮೀಸಲಾತಿ ಬೇಕು ಎಂಬ ಕೂಗು ಇತ್ತೀಚೆಗೆ ಸಾಮಾನ್ಯವಾಗಿ ಕೇಳಿ ಬರುತ್ತಿದೆ. ಇದನ್ನು ವಿರೋಧಿಸುವವರೂ ಇದ್ದಾರೆ. ಈ ವಿಚಾರದಲ್ಲಿ ಓದುಗರಿಂದ ಅಭಿಪ್ರಾಯಗಳನ್ನು ಆಹ್ವಾನಿಸುತ್ತೇವೆ. ಚರ್ಚೆ ಮಾರ್ಚ್ ಸಂಚಿಕೆಯಲ್ಲಿ ಆರಂಭ. ●

'ಹಿತೈಷಿಣಿ': ಒಂದು ನೆನಕೆ

ವಿಜಯಾ ದಬ್ಬೆ

ಈ ಶತಮಾನ ಆಗಷ್ಟೇ ಕಾಲಿಡುತ್ತಿತ್ತು, ಬಾಲ್ಯವಿವಾಹನಿಷೇಧ ಕಾಯ್ದೆ ಇನ್ನೂ ರೂಪುಗೊಂಡಿರಲಿಲ್ಲ, ಪಾಲಘಾಟಿನ ಬ್ರಾಹ್ಮಣರು ಈ ಕಾಯ್ದೆ ಬಂದೀತೆಂದು ಹೆದರಿ ಆದಿರುದ್ರನ ಮೊರೆಹೋಗಲು ದುಬಾರಿ ಹೋಮ ಮಾಡಬೇಕಾಗಿ ಬಂದ ಕಾಲವಾಗಿರಲಿಲ್ಲ, ನಂಜನಗೂಡಿನ ಹದಿಮೂರರ ಬಾಲೆ ಹಸೆಯೇರಿ ಮಾಂಗಲ್ಯಕ್ಕೆ ಕೊರಳೊಡ್ಡಿದ್ದಳು. ಮದುವೆಗಿಟ್ಟ ಕಾರಣ ಮಾಸುವ ಮುನ್ನವೇ ಈ ಪುಟ್ಟ ಮುತ್ತೈದೆಯ ಪಟ್ಟಕ್ಕೆ ಪೆಟ್ಟು ಬಿದ್ದಿತ್ತು. ಈ ಹುಡುಗಿಯೊಡನೆ ಹಸೆಯೇರಿದ್ದ ಹುಡುಗ ಪ್ಲೇಗಿಗೆ ತುತ್ತಾಗಿದ್ದ. ಈ ಆಘಾತದ ಅಗ್ನಿಕುಂಡದಲ್ಲೇ ಈ ಹುಡುಗಿಯ ಮತ್ತೊಂದು ಮಗ್ಗುಲಿನ ಜೀವನ ಚಿಗುರಿತು. ಮಹಿಳೆಯರಿನ್ನೂ ಪ್ರವೇಶಿಸದಿದ್ದ ಆಧುನಿಕ ಕನ್ನಡ ಸಾರಸ್ವತಲೋಕಕ್ಕೆ ಅಡಿಯಿಟ್ಟು, ಸಂಪಾದಕಿಯಾಗಿ, ಲೇಖಕಿಯಾಗಿ, ಪ್ರಕಾಶಕಿಯಾಗಿ ತಮ್ಮ ಬೆರಳೆಣಿಕೆಯ ಜೊತೆಗಾರ್ತಿಯರೊಡನೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹೊಸಪುಟವೊಂದನ್ನು ತೆರೆದ ಈಕೆಯೇ ನಂಜನಗೂಡು ತಿರುಮಲಾಂಬ. ಸಮಾಜದ ಮುಖ್ಯವಾಗಿ ಮಹಿಳೆಯರ 'ಹಿತ'ವನ್ನು ತಮ್ಮದೇ ಆದ ರೀತಿಯಲ್ಲಿ ಬಯಸಿ, ದುಡಿದ ಅವರ ಕಾವ್ಯನಾಮ 'ಹಿತೈಷಿಣಿ', ಗ್ರಂಥಮಾಲೆ 'ಸತೀ ಹಿತೈಷಿಣಿ'.

ವಿದ್ವಾಂಸರನ್ನೂ ಕಲಾಕಾರರನ್ನೂ ಕರ್ನಾಟಕಕ್ಕೆ ನೀಡಿದ ನಂಜನಗೂಡಿನ ತುಂಬಿದ, ಆಚಾರನಿಷ್ಠ ಮನೆತನದಲ್ಲಿ ವೆಂಕಟಕೃಷ್ಣ ಅಯ್ಯಂಗಾರ್ ಮತ್ತು ಅಲಮೇಲಮ್ಮನವರಿಗೆ ಮೂರನೆಯ ಹೆಂಗೂಸಾಗಿ 1887 ಮಾರ್ಚ್ 25ರಂದು ತಿರುಮಲಾಂಬ ಜನಿಸಿದರು. ಮೂರುವರೆ ವರ್ಷಗಳ ಶಾಲಾಶಿಕ್ಷಣದ ನಂತರ ಶಾಲೆಗೆ ವಿದಾಯ ಹೇಳಿದ ಅವರ ಬದುಕನ್ನು ವೈಧವ್ಯ ಅನಿರೀಕ್ಷಿತವಾಗಿ ಬದಲಿಸಿತು. ಕೊಳ್ಳೇಗಾಲದ ಸಿರಿವಂತ ಮನೆತನಕ್ಕೆ ಸೊಸೆಯಾಗಿ ಹೋಗಬೇಕಾಗಿದ್ದ ತಿರುಮಲಾಂಬ ಬಾಲವಿಧವೆಯಾಗಿ ತಂದೆಯ ಮನೆಯಲ್ಲಿ ಉಳಿದರು. ತಮ್ಮ ಮೆಚ್ಚಿನ ಮಗಳನ್ನು ವೆಂಕಟಕೃಷ್ಣಯ್ಯಂಗಾರರು ವಿಶೇಷ ಆದರದಿಂದ ಕಂಡುಕೊಂಡು ಮಾರ್ಗದರ್ಶನ ಮಾಡಿದರು. ಪುರಾಣ, ಕಾವ್ಯ, ಧರ್ಮಗ್ರಂಥಗಳ ಅಭ್ಯಾಸ, ಭಾಷಾ ಕಲಿಕೆ, ಸಾಹಿತ್ಯ ರಚನೆ ಎಲ್ಲವನ್ನೂ ತಿರುಮಲಾಂಬ ಸತತ ನಿಷ್ಠೆಯಿಂದ ಮಾಡತೊಡಗಿದರು. ಮೂವತ್ತಾರು ಚದುರಗಳ ದೊಡ್ಡಮನೆ, ಲೆಕ್ಕವಿಲ್ಲದಷ್ಟು ಅತಿಥಿ, ಅಭ್ಯಾಗತರಿಗೆ ಮಾಡಬೇಕಾಗಿದ್ದ ಸತ್ಕಾರ– ಈ ಎಲ್ಲ ದುಡಿಮೆ ಮುಗಿಯುವಾಗ ರಾತ್ರಿಯ ಹನ್ನೊಂದೋ ಹನ್ನೆರಡೋ ಹೊಡೆದಿರುತ್ತಿತ್ತು. ನಂತರ ಅವರ ಬರವಣಿಗೆಯ ಕೆಲಸ. ಮಧ್ಯರಾತ್ರಿಗಳಲ್ಲಿ ಅವರ ಕಾದಂಬರಿಗಳ ಸೂರ್ಯೋದಯದ ವರ್ಣನೆ ರೂಪುಗೊಳ್ಳುತ್ತಿತ್ತು.

ತೀಕ್ಷ್ಣವಾದ ಗ್ರಹಣ ಮತ್ತು ಅಭಿವ್ಯಕ್ತಿ ಶಕ್ತಿ, ಅಪೂರ್ವ ಜ್ಞಾಪಕ ಶಕ್ತಿ, ಶಿಸ್ತು, ಸತತವಾದ ದುಡಿಮೆ ಪ್ರತಿಯೊಂದು ಕೆಲಸದಲ್ಲಿ ಅಚ್ಚುಕಟ್ಟು-ಈ ಮೊದಲಾದ ಅವರ ಮೂಲಗುಣಗಳು ಅವರು ಮಾಡಿದ ಕೆಲಸಗಳಲ್ಲೆಲ್ಲ ಎದ್ದು ಕಾಣುತ್ತಿದ್ದವು. ಅವ್ಯಾಜ ಬಂಧು-ಮಿತ್ರ ಪ್ರೇಮ, ಅಗತ್ಯವಿದ್ದೆಡೆಗೆ ಅಚಿಂತ್ಯವಾಗಿ ಸಹಾಯಹಸ್ತ ಚಾಚಲು ಹಿಂದೆಗೆಯದ ಪ್ರವೃತ್ತಿ, ಕಾರ್ಯಮುಖೇನ ವ್ಯಕ್ತವಾಗುತ್ತಿದ್ದ ಪ್ರೀತಿ–ಇವೆಲ್ಲ ಅವರ ವ್ಯಕ್ತಿತ್ವದ ಅವಿಭಾಜ್ಯ ಅಂಗಗಳಾಗಿದ್ದವು. ಮೂವತ್ತನೆಯ ವಯಸ್ಸಿಗೇ ಅಂಟಿದ ವಾತರೋಗ, ಎರಡುಬಾರಿ ಶಸ್ತ್ರಚಿಕಿತ್ಸೆಗೆ ಒಳಗಾದ ಕಣ್ಣು, ಇಳಿಗಾಲದಲ್ಲಿ ಕಾಲಿನ ಮೂಳೆಮುರಿತ ತಾಯಿ, ತಂದೆ, ಪತಿ, ಸೋದರನ ಅಗಲಿಕೆ, ಪ್ರೀತಿಯ ಅಮೂಲ್ಯ ಪುಸ್ತಕ ಸಂಗ್ರಹದ ವಿನಾಶ–ಈ ಎಲ್ಲ ಬದುಕಿನ ಕಹಿಗಳ ಮಧ್ಯೆಯೂ ಅವರ ಅಧ್ಯಯನಶೀಲ ಕಾರ್ಯೋನ್ಮುಖ ಪ್ರವೃತ್ತಿ ಜೀವಂತವಾಗಿತ್ತು. ಹದಿಮೂರರ ಮುಗ್ಧ ಮುತ್ತೈದೆಯಾಗಿ, ಹದಿನಾಲ್ಕರ ಬಾಲವಿಧವೆಯಾಗಿ, ತಪಸ್ಸಿನಂತೆ ಬರಹ, ಪ್ರಕಾಶನ, ಪತ್ರಿಕಾ ಸಂಪಾದನೆಗಳನ್ನು ಹಚ್ಚಿಕೊಂಡ ಯುವತಿಯಾಗಿ, ಪ್ರಕಾಶನ, ಸಂಪಾದನೆಯಿಂದ ಎದುರಾದ ಆರ್ಥಿಕ ಮುಗ್ಗಟ್ಟಿನಲ್ಲಿ ಹಾಗೂ ಸಮಾಜ ಹಾಗೂ ಸಾಹಿತ್ಯಕ್ಷೇತ್ರದ ವಿಮರ್ಶೆ, ಟೀಕೆಗಳ ನಡುವೆ ದೃಢವಾಗಿ ಹೋರಾಡಿದ ಸ್ಥಿರಚಿತ್ತೆಯಾಗಿ, ನಿಷ್ಠಾವಂತೆಯಾಗಿ, ಅನಿಕೇತನೆ ಸ್ನೇಹಮಯಿಯಾಗಿ ಬದುಕಿನ ಸಿಹಿಕಹಿಗಳನ್ನು ಉಂಡು, ಏರು

ಪ್ರಗತಿಯ ಹಾದಿಯಲ್ಲಿ ಮುಂದುವರಿಯಬೇಕಾದರೆ ಹಸಿವು, ಅಜ್ಞಾನ, ರೋಗರುಜಿನಗಳ ವಿರುದ್ಧ ಹೋರಾಡಬೇಕಿದೆ. ಇದಕ್ಕೆ ವಿಜ್ಞಾನದ ನೆರವು ಅತ್ಯಗತ್ಯ. ವಿಜ್ಞಾನದ ಬೆಳವಣಿಗೆ ಮತ್ತು ಸಾಧನೆ ಹೆಣ್ಣಿನ ಸ್ವಾತಂತ್ರ್ಯವನ್ನು ಹೆಚ್ಚಿಸಿದೆಯೆನ್ನುವುದರಲ್ಲಿ ಸಂಶಯವಿಲ್ಲ. ವೈಜ್ಞಾನಿಕ ಸಂಶೋಧನೆಯ ಫಲಗಳನ್ನು ಮಾತ್ರ ಆನಂದಿಸುತ್ತಾ ವೈಜ್ಞಾನಿಕ ಚಿಂತನದೃಷ್ಟಿಯನ್ನು ಬೆಳಸಿ ಕೊಳ್ಳದಿದ್ದರೆ ಸ್ವಾತಂತ್ರ್ಯ-ವಿಮೋಚನೆಯೆನ್ನುವುದು ಕನಸಿನ ಮಾತಾದೀತು. ವೈಜ್ಞಾನಿಕ ಮತ್ತು ತಾಂತ್ರಿಕ ಶಿಕ್ಷಣ ಪಡೆದರೂ, ಅದನ್ನು ಬದುಕಿನಲ್ಲಿ ಕೆರೀಯರ್ ಆಗಿ ತೆಗೆದುಕೊಳ್ಳದೆ, ಸಮಾಜದ ರೂಢಿಗತ ಸಾಂಪ್ರದಾಯಕ ಪಾತ್ರಗಳಲ್ಲೇ ಮಹಿಳೆ ತೃಪ್ತಳಾದರೆ, ಅವಳು ಮಹತ್ತರವಾದುದೇನನ್ನೂ ಸಾಧಿಸಲಾರಳು. ಈ ದಿಸೆಯಲ್ಲಿ ಮೇರಿಕ್ಯೂರಿಯಂತಹವರ ಜೀವನ ನಮ್ಮೆಲ್ಲರ ಆದರ್ಶವಾಗಬೇಕು.

* * * * *

ಮಹಿಳೆಯನ್ನು ಅಸಭ್ಯವಾಗಿ ಚಿತ್ರಿಸುವುದನ್ನು ನಿಷೇಧಿಸುವ ಮಸೂದೆಯನ್ನು 1986ರ ನವೆಂಬರ್ 12ರಂದು ರಾಜ್ಯಸಭೆಯಲ್ಲಿ ಅಂಗೀಕರಿಸಲಾಯಿತು. ರಾಜ್ಯಸಭೆಯಲ್ಲಿ ಅಂಗೀಕರಿಸಲಾಗಿರುವ ಈ ಮಸೂದೆ ಲೋಕಸಭೆಯ ಅಂಗೀಕಾರದ ನಂತರ ರಾಷ್ಟ್ರಾಧ್ಯಕ್ಷರ ಅಂಗೀಕಾರ ಪಡೆಯಬೇಕಾಗಿದೆ. ಇಂತಹ ಮಸೂದೆಯೊಂದನ್ನು ಇಷ್ಟು ದಿನಗಳ ನಂತರವಾದರೂ ಜಾರಿಗೆ ತರಬೇಕೆಂದಿರುವುದು ಒಳ್ಳೆಯದು; ಸ್ವಾಗತಾರ್ಹ.

— ಎನ್. ಗಾಯತ್ರಿ

ಮುಂಬರುವ ಸರ್ವಾಧಿಕಾರಿಗೆ

ಕೊಲ್ಲಲು
ನೀ ಬಂದಾಗ
ನಾನಿಲ್ಲದಿದ್ದರೆ
ಬೇಸರ ಬೇಡ

ಸಾಗರದ ತೆರೆ
ಸೂರ್ಯ ಕಿರಣ
ಹೂಗೊಂಚಲು
ಹುಲ್ಲುಗರಿ
ಎಲ್ಲೆ ಮೀರಿ ಜಗಿವ
ಹುಲ್ಲೆ ಮರಿ

ಮತ್ತೆ
ಬದ ಕಿರುವ
ಕಡೆಗಳಲ್ಲೆಲ್ಲ
ನಾ
ಬದುಕಿರುವೆ

ಹಸುಗೂಸಿನ
ಹಾಲುಗಲ್ಲದಲ್ಲಿ
ಅಮೃತತ್ವ
ಕಂಡಿರುವೆ
ಸಾವಿಲ್ಲ ನನಗೆ

ನೀ ಬಂದಾಗ
ನಾನಿಲ್ಲದಿದ್ದರೆ
ಬೇಸರ ಬೇಡ
ನಿನ್ನ
ಕಗ್ಗತ್ತಲ ಹೃದಯದ
ಮೂಲೆಯಲೊಂದು
ಮಾನವತೆಯ
ಕಿರಣವಿದೆ

ಹೋಗು ನೀ
ಅದರ ಮೂಲಕ್ಕೆ

ಅಲ್ಲೇ ಇರುವೆ
ಕೊನೆಗೆ ಸಿಗುವ
ನಿನ್ನ ತಾಯ
ಗರ್ಭದಲ್ಲೇ

—ದರ್ಗಾ

ತಿರುಮಲಾಂಬ 'ವಿರಾಗಿಣಿ'ಯ ಮುನ್ನುಡಿಯಲ್ಲಿ ಹೀಗೆ ಬಣ್ಣಿಸುತ್ತಾರೆ: "ಇತ್ತ ದುರಾಶಯದ ದುರ್ಭೋದೆ-ದುರಭಿ ಸಂಧಿ-ದ್ರೋಹ-ದಯಾಶೂನ್ಯತೆಯೇ ಮೊದಲಾದವುಗಳ ಮುತ್ತಿಗೆ, ಅತ್ತ ಸಮಾಜ ಶಾಸನದ ಮುಂಡನ-ಏಕಾಶನ – ಗುಪ್ತಗೃಹನಿವಸನ – ಮಾಲಿನ್ಯಾದಿಗಳ ನಿಷ್ಠುರತೆ!.... ಆ ದೀನ ಭಗಿನಿಯರಿಗೆ ನೆಲೆಯೆಲ್ಲಿ? ಅಡಿಗೆ ಮನೆಯೆಲ್ಲಿ- ಹಿತ್ತಲ ಕೋಣೆಯಲ್ಲಿಯೇ !!! ಹೇಗೂ ಈ ಅನಾಥೆಯರಿಗೆ ಕಣ್ಣೀರ್ಗರೆವುದೊಂದೇ ನಿತ್ಯನೈಮಿತ್ತಿಕ ವೃತ್ತಿ! ಆಪ್ತರಾಗಿ ತೋರುವವರ ಮುಂದೆ ಆತ್ಮಸಂತಾಪಗಳಿಗಾಗಿ ಹಲಬುವುದೇ ಅವರು ಕಲಿಯಬೇಕಾದ ಕಲೆ! ಆವ ಕಾಲಕ್ಕೆ ಆವ ದೂರು ಮೇಲೆ ಬೀಳುವುದೋ ! ಎಂಬ ಭೀತಿಯಿಂದ ಅಂತರಂಗ ಕ್ಲೇಶಗಳನ್ನು ಅಡಗಿಸಿ ಬಾಹ್ಯರಂಗದಲ್ಲಿ ಸೌಜನ್ಯವನ್ನು ಹೊರಸೂಸುವುದೇ ಅಧ್ಯವಸಾಯ." ಇಂಥ ಪ್ರವಾಹದ ವಿರುದ್ಧ ಈಜಿಯೇ ತಿರುಮಲಾಂಬ ಕಾದಂಬರಿಕಾರ್ತಿಯಾದದ್ದು, ಪ್ರಕಾಶಕಿಯಾದದ್ದು, ಸಂಪಾದಕಿಯಾದದ್ದು. ಇಂಥ ಪ್ರಯತ್ನಗಳೇ ಮುಂದಿನ ದಶಕಗಳ ಸ್ತ್ರೀಪ್ರಜ್ಞೆಯ ಎಚ್ಚರಕ್ಕೆ ಹಸಿರುಬಾವುಟ ಬೀಸಿದವು.

ತಿರುಮಲಾಂಬ ಅವರ ಸೃಜನಶೀಲ ಸಾಹಿತ್ಯದಲ್ಲಿ ಗುಣ ಮತ್ತು ಪ್ರಮಾಣದ ದೃಷ್ಟಿಯಿಂದ ಕಾದಂಬರಿ ಮೊದಲ ಸ್ಥಾನವನ್ನು ಪಡೆದರೆ ಎರಡನೆಯ ಸ್ಥಾನ ನಾಟಕಗಳದ್ದು. 1908-09ರ ವೇಳೆಗೇ ಅವರು 'ಸಾವಿತ್ರಿ ಚರಿತ್ರೆ', 'ಜಾನಕಿ ಕಲ್ಯಾಣ'ವೆಂಬ ಯಕ್ಷಗಾನಗಳನ್ನೂ, 'ಭಾನುತೇಜ ವಿಜಯ' ಮತ್ತು 'ಶ್ರೀಮಂತಿನಿ ವಿಜಯ' ಎಂಬ ನಾಟಕಗಳನ್ನು ರಚಿಸಿದ್ದರೂ ಅವು ಪ್ರಕಟವಾಗಲಿಲ್ಲ. ಈಗ ದೊರೆತಿರುವ ಅವರ ನಾಟಕಗಳು ಕ್ರಮವಾಗಿ ಹೀಗಿವೆ : 'ರಮಾನಂದ' (1916), 'ಚಂದ್ರವದನಾ' (1916), 'ವಿವೇಕೋದಯ' (1922), 'ಭಾರ್ಗವ ಗರ್ವಭಂಗಂ' (1928), ನೀತಿಬೋಧೆಯನ್ನು ಪ್ರಮುಖವಾಗಿ ತನ್ನ ಗಮನದಲ್ಲಿಟ್ಟುಕೊಂಡಿರುವ ಈ ನಾಟಕಗಳು ಸಾಂಪ್ರದಾಯಿಕವಾಗಿ ಪ್ರಮುಖವಾದ ಅನೇಕ ಆದರ್ಶಗಳನ್ನು ಬಿಂಬಿಸಿವೆ. ಈ ನಾಟಕಗಳಲ್ಲಿ ಸಾಹಿತ್ಯಾಂಶದ ಕೊರತೆಗಳು, ರಂಗ ಪ್ರಯೋಗದ ದೃಷ್ಟಿಯಿಂದ ಇರುವ ಮಿತಿಗಳು ಸಾಕಷ್ಟಿವೆಯಾದರೂ ಈ ಪ್ರಕಾರದಲ್ಲಿನ ಲೇಖಕಿಯರ ಕೃಷಿಯ ಇತಿಹಾಸಕ್ಕೆ ಆರಂಭ ಬಿಂದುಗಳನ್ನು ಒದಗಿಸಿ ಈ ರಚನೆಗಳು ಐತಿಹಾಸಿಕ ಮಹತ್ವವನ್ನು ಪಡೆಯುತ್ತವೆ.

ತಿರುಮುಮಲಾಂಬರ ಸಾಹಿತ್ಯಕೃಷಿ ಪ್ರಾರಂಭವಾದದ್ದು ಗೀತಪ್ರಕಾರದಿಂದಲೇ ಆದರೂ ಈ ರಚನೆಗಳು ಕೆಲವು ಕಾದಂಬರಿಗಳು ಪ್ರಕಟಗೊಂಡ ತರುವಾಯ ಪ್ರಕಟವಾದವು. ಬಿಡಿರಚನೆಗಳು ಹೆಚ್ಚು ಕಡಿಮೆ ಸತತವಾಗಿ 'ಕರ್ನಾಟಕ ನಂದಿನಿ' ಮತ್ತು 'ಸನ್ಮಾರ್ಗದರ್ಶಿ'ಯಲ್ಲಿ ಪ್ರಕಟಗೊಂಡವು. 1901-02ರ ಅವಧಿಯಲ್ಲಿ ರಚನೆಯಾದ ಭಕ್ತಿಗೀತೆಗಳು 'ಭಕ್ತಿಗೀತಾವಲಿ'ಯಲ್ಲಿ ಸಂಕಲನಗೊಂಡು 1971ರಲ್ಲಿ ಬೆಳಕಿಗೆ ಬಂದವು. ಮೊದಲು ರಚನೆಗೊಂಡು ಕೊನೆಗೆ ಪ್ರಕಟವಾದ ಈ ರಚನೆಗಳು ಭಕ್ತಿಯನ್ನು ಸ್ಥಾಯಿಯಾಗಿ ಹೊಂದಿವೆ. 1910-11ರ ಅವಧಿಯಲ್ಲಿ ರಚನೆಯಾದ ಹಾಡುಗಳು 'ಭದ್ರಗೀತಾವಳಿ' ಯಲ್ಲಿ 1916ರಲ್ಲಿ ಹೊರಬಂದವು. ಈ ಮಾಲೆಯ ಮೂರನೆಯ ಕೃತಿಯಾಗಿ 'ಭಾವಗೀತಾವಲಿ'ಯನ್ನು ಪ್ರಕಟಿಸುವ ಲೇಖಕಿಯ ಆಶಯ ಆಶಯವಾಗಿಯೇ ಉಳಿಯಿತು.

> ನಮ್ಮ ನೆರೆರಾಜ್ಯವಾದ ತಮಿಳುನಾಡಿನಲ್ಲಿ "ಮಹಿಳೆಯರಿಂದ ಮಹಿಳೆಯರಿಗಾಗಿ" 'ಹಿತಕಾರಿಣಿ' (1909), 'ಪೆಣ್‌ಕಲ್ವಿ' (1912) ಪತ್ರಿಕೆಗಳು ಪ್ರಕಟಗೊಳ್ಳಲು ಆರಂಭವಾಗಿದ್ದರೂ ಕರ್ನಾಟಕದಲ್ಲಿ 1916ರವರೆಗೆ ಈ ದಿಕ್ಕಿನ ಪ್ರಯತ್ನಗಳು ಕಾಣುವುದಿಲ್ಲ. 1916ರಲ್ಲಿ ತಿರುಮಲಾಂಬ ತಮ್ಮ 'ಕರ್ನಾಟಕ ನಂದಿನಿ'ಯ ಮೂಲಕ ಇಂಥ ಪತ್ರಿಕೆಯ ಶಕೆಯೊಂದನ್ನು ಇಲ್ಲಿ ಆರಂಭಿಸಿದರು.

'ಕರ್ನಾಟಕ ನಂದಿನಿ' ಪತ್ರಿಕೆಯ ಮೊದಲ ಸಂಚಿಕೆಯ 'ಕೋರಿಕೆ'ಯಲ್ಲಿ ಹೇಳುವಂತೆ 'ನಮ್ಮ ಕರ್ನಾಟಕದಲ್ಲಿ ಸ್ತ್ರೀಯರು ಲೇಖನಕಾರ್ಯದಲ್ಲಿಯಾಗಲೀ, ಸಮಾಜದ ಕಲ್ಯಾಣಕ್ಕೆ ಬೇಕಾಗುವ ಸುಧಾರಣಾ ವಿಷಯಗಳಲ್ಲಿ ಅಭಿಪ್ರಾಯವನ್ನು ಕೊಡುವುದರಲ್ಲಿಯಾಗಲೀ ಅರ್ಹರಾಗಿಲ್ಲವೆಂದೂ ಸ್ತ್ರೀಯರು ಗೃಹಕಾರ್ಯವೊಂದಲ್ಲದೆ ಮತ್ತಾವು

ತಗ್ಗುಗಳನ್ನು ಕಂಡು ಹಣ್ಣಾದ ತಿರುಮಲಾಂಬರ ಜೀವ ಇಹದ ತೊಟ್ಟಿನಿಂದ 1-9-1982ರಂದು ಕಳಚಿಬಿದ್ದಿತು.

1901-2ರ ಅವಧಿಯಲ್ಲೇ ಪ್ರಾರಂಭವಾದ ತಿರುಮಲಾಂಬರ ಬರವಣಿಗೆ 1910-11ರ ವೇಳೆಗೆ ಸ್ಫುಟವಾಗತೊಡಗಿತು. ಮುಂದಿನ ಸುಮಾರು ಮೂರು ದಶಕಗಳಲ್ಲಿ ಬೆಳೆದು ನಂತರ ಸದ್ದಿಲ್ಲದಾಯಿತು. ಸುಮಾರು 1912-13ರಿಂದ 1939-40ರವರೆಗಿನ ಅವಧಿಯನ್ನು ತಿರುಮಲಾಂಬ ಅವರ ಬರವಣಿಗೆಯ ಅವಧಿ ಅಥವಾ ಬರವಣಿಗೆಯ ಮುಖ್ಯ ಅವಧಿ ಎನ್ನಬಹುದು. ಕಾದಂಬರಿ, ನಾಟಕ, ಪ್ರಬಂಧ, ಗೀತೆ—ಈ ನಾಲ್ಕು ಅವರ ಬರವಣಿಗೆಯ ಮುಖ್ಯ ಪ್ರಕಾರಗಳು.

> 1913ರಲ್ಲಿ ಪ್ರಕಟವಾದ 'ಸುಶೀಲೆ'ಯೇ ಅವರ ಮೊದಲ ಪ್ರಕಟಿತ ಕಾದಂಬರಿ. ಆ ಮೊದಲೇ ಅವರು 'ನಭಾ', 'ವಿದ್ಯುಲ್ಲತಾ' ಮತ್ತು 'ವಿರಾಗಿಣಿ'—ಈ ಕಾದಂಬರಿಗಳನ್ನು ಬರೆದಿದ್ದರೂ ಅವು ನಂತರ ಪ್ರಕಟವಾದವು. 'ಸುಶೀಲೆ'ಯ ನಂತರ ಒಂದರ ಹಿಂದೊಂದರಂತೆ 'ದಕ್ಷಕನ್ಯಾ', 'ಮಾತೃನಂದಿನಿ', 'ವಿಕ್ರಮ' 'ಪೂರ್ಣಕಲಾ' 'ನಿಶಾಂತ' ಮೊದಲಾದ ಕಾದಂಬರಿಗಳು ಪ್ರಕಟವಾದವು. ಪೂರ್ಣವಾಗಿ ಅಚ್ಚಾದ ಅವರ ಕಾದಂಬರಿಗಳು 12, ಅಪೂರ್ಣವಾಗಿ ಅಚ್ಚಾದವು ಎರಡು ಮತ್ತು ಕೇವಲ ಉಲ್ಲೇಖಗೊಂಡ ಕಾದಂಬರಿಗಳು ಮೂರು ಎಂದು ಈಗಿರುವ ಮಾಹಿತಿಗಳಿಂದಹೇಳಬಹುದು.

ವಿಧವಾ ಸಮಸ್ಯೆ, ವರದಕ್ಷಿಣೆಯ ಸಮಸ್ಯೆ, ಬಾಲ್ಯ ವಿವಾಹ ಸಮಸ್ಯೆ—ಮೊದಲಾದ ಅನೇಕ ಸಾಮಾಜಿಕ ಸಮಸ್ಯೆಗಳನ್ನು ತಮ್ಮ ಕಾದಂಬರಿಗಳ ಕೇಂದ್ರ ಸಮಸ್ಯೆಗಳಾಗಿ ತಿರುಮಲಾಂಬ ತೆಗೆದುಕೊಳ್ಳುತ್ತಾರೆ. ಈ ಸಮಸ್ಯೆಗಳ ನಿವಾರಣೆಯ ವಿಶ್ಲೇಷಣೆಯ ವಿಷಯದಲ್ಲಿ ಅವರು ತಳೆಯುವ ನಿಲುವು ಇವತ್ತು ನಮಗೆ ಒಪ್ಪಿಗೆಯಾಗದಿರಬಹುದು, ಅನೇಕ ವಿಷಯಗಳ ಬಗೆಗಿನ ಅವರ ದೃಷ್ಟಿಕೋನ ಇವತ್ತು ನಮಗೆ ತೀರ ಸಾಂಪ್ರದಾಯಿಕವಾಗಿ ಕಾಣಬಹುದು ಆದರೆ ಈ ಸಮಸ್ಯೆಗಳನ್ನು ಅವರು ಗುರುತಿಸಿದ್ದು ಹಾಗೂ ಸ್ತ್ರೀಸತ್ತ್ವದ ಪರವಾಗಿ ದನಿಯೆತ್ತಿದ್ದು ಐತಿಹಾಸಿಕವಾಗಿ ಬಹಳ ಮುಖ್ಯವಾದ ಸಂಗತಿ. ಸ್ತ್ರೀ ವಿದ್ಯಾಭ್ಯಾಸದ ಅಗತ್ಯವನ್ನು ಅವಕಾಶವಾದಲ್ಲೆಲ್ಲ ಅವರು ಒತ್ತಿ ಹೇಳಿದ್ದಾರೆ. ಪ್ರಕಟಗೊಂಡ ಮೊದಲ ಕಾದಂಬರಿಯಾದ ಸುಶೀಲೆಯಲ್ಲೇ ಅವರು ಈ ಕೆಲಸಕ್ಕೆ ತೊಡಗಿದ್ದಾರೆ. 'ಹೆಂಗಸಿಗೆ ಓದೆಂದರೇನು?' 'ಓದು ಬರಹ ಬಲ್ಲ ಈ ಕಾಲದ ಹುಡುಗಿಯರನ್ನು ನಂಬುವುದು ಹೇಗೆ?' ಮೊದಲಾದ ಟೀಕೆ, ಅಡೆತಡೆಗಳೇ ಸ್ತ್ರೀ ವಿದ್ಯಾಭ್ಯಾಸದ ಮುಂದಿದ್ದಾಗ, ಮಹಿಳೆಯರು ಪುಸ್ತಕ ಹಿಡಿಯುವುದೇ ತಪ್ಪು ಎಂಬ ಸ್ಥಿತಿಯಿದ್ದಾಗ ತಿರುಮಲಾಂಬ ಅವರ ವಿರುದ್ಧ ಹೋರಾಡಿದರು. ಆದರೆ ಸ್ತ್ರೀ ವಿದ್ಯಾಭ್ಯಾಸದ ಸ್ವರೂಪ ಮತ್ತು ಗುರಿಗಳನ್ನು ಗ್ರಹಿಸುವಲ್ಲಿ ಅಂದಿನ ಸುಧಾರಣಾವಾದಿಗಳು ಸಾಮಾನ್ಯವಾಗಿ ಗ್ರಹಿಸಿದ್ದನ್ನೇ ಅವರು ಗ್ರಹಿಸಿದರು, ಇಂದಿನ ನಮಗೆ ದೂರವಾದರು, ಭಿನ್ನವಾದರು. ಗ್ರಹಿಕೆಯ ಈ ಭಿನ್ನತೆ ಇದ್ದರೂ ಅವರ ಅವಿರತವಾದ ಸ್ತ್ರೀವಿದ್ಯಾಭ್ಯಾಸದ ಪ್ರತಿಪಾದನೆ ನಮ್ಮ ಚರಿತ್ರೆಯಲ್ಲೊಂದು ಮುಂದ್ಹೆಜ್ಜೆಯೆಂದೇ ಪರಿಗಣಿಸಬೇಕಾಗುತ್ತದೆ. ತಿರುಮಲಾಂಬರ ಪ್ರಧಾನ ಸ್ತ್ರೀಪಾತ್ರಗಳು ಚರ್ವಿತಚರ್ವಣವಾದ ಸ್ತ್ರೀವಿರೋಧಿ ಮೌಲ್ಯಗಳಿಗೆ ಗಂಟುಬಿದ್ದವೆಯಾದರೂ ಅವು ಅಳುಮೋರೆಯ, ಕೋಮಲ ಪಾತ್ರಗಳಲ್ಲ. ಅವರೆಲ್ಲ ತಾವು ನಂಬಿದ ದಿಕ್ಕಿನಲ್ಲಿ ದೃಢವಾಗಿ ನಡೆಯುವ ಸಾಧಕಿಯರು. 'ದಕ್ಷಕನ್ಯಾ', 'ವಿಕ್ರಮ' ಕಾದಂಬರಿಗಳ ನಾಯಕಿಯರು ವಾಸ್ತವ ಲೋಕಕ್ಕಿಂತ ಹೆಚ್ಚಾಗಿ ವಿಸ್ಮಯ ಲೋಕವನ್ನು ಪ್ರತಿನಿಧಿಸಿದರೂ ಅವರ ಸಾಮರ್ಥ್ಯ, ಸಾಹಸ ಪ್ರವೃತ್ತಿ, ಧೀಮಂತಿಕೆಗಳು ಸ್ತ್ರೀ ಚೈತನ್ಯವೊಂದರ ಕನಸು, ಆದರ್ಶಗಳೆಂದು ನಾವು ಅರ್ಥೈಸಿದರೂ ತಿರುವಮಲಾಂಬರ ಸುಪ್ತಪ್ರಜ್ಞೆ ಹಾಡಿದ ಈ ಸ್ತ್ರೀವಿಮೋಚನೆಯ ನಾಂದಿಗೀತ ತನ್ನೆಲ್ಲ ಮುಸುಕಗಳೊಡನೆಯೂ ಇಂದಿನ ನಮಗೆ ಅರ್ಥಪೂರ್ಣವಾಗಿದೆ. ತಮ್ಮ ವೈಯಕ್ತಿಕ ಜೀವನದ ದೊಡ್ಡ ದುರಂತವಾಗಿ ಕಾಡಿದ ವೈಧವ್ಯ ಅವರ ಬಹುಪಾಲು ಬರಹಗಳ ವಸ್ತುವಾದದ್ದು ಆಶ್ಚರ್ಯವಲ್ಲ. ಅಂದಿನ ವಿಧವೆಯ ಸ್ಥಿತಿಯನ್ನು

ವ್ಯಾಸ ಭಾರತದಲ್ಲಿ ಕೇವಲ ಹೆಸರಾಗಿ, ಬಿಂದು ಮಾತ್ರವಾಗಿ ಕಾಣಿಸಿಕೊಂಡು, ‘ಕನ್ನಡ ಜೈಮಿನಿ ಭಾರತ’ದಲ್ಲಿ ಪ್ರಾಸಂಗಿಕವಾಗಿ ಬಂದಿರುವ ಚಿತ್ರಾಂಗದೆಯ ಕಥೆ ಮತ್ತು ರವೀಂದ್ರನಾಥ ಠಾಕೂರರ ‘ಚಿತ್ರಾ’–ಇವೆರಡೂ ಕುವೆಂಪುರವರ ‘ಚಿತ್ರಾಂಗದೆ’ ಹಿನ್ನೆಲೆಯಾಗಿದೆ; ಅಷ್ಟೇ ಅಲ್ಲ ಕಾವ್ಯ ಪಂಕರವನ್ನೂ, ಪ್ರೇರಣೆಯನ್ನೂ ಒದಗಿಸಿವೆ. ಕುವೆಂಪುರವರು ತಮ್ಮ ‘ಚಿತ್ರಾಂಗದೆ’ಯಲ್ಲಿ ಪೂರ್ವಭಾಗಕ್ಕೆ ರವೀಂದ್ರರಿಗೆ ಋಣಿಯಾಗಬೇಕಾದರೆ, ಉತ್ತರ ಭಾಗಕ್ಕೆ ಲಕ್ಷ್ಮೀಶನಿಗೆ ಋಣಿಯಾಗಬೇಕಿದೆ.

> ಪುರುಷ ವ್ಯಕ್ತಿತ್ವದ ಸ್ತ್ರೀ ಚಿತ್ರಾಂಗದೆ ಅರ್ಜುನನನ್ನು ಕಂಡಾಗ ಹೊಂದುವ ಸ್ತ್ರೀಭಾವ-ಚಿಕ್ಕಂದಿನಿಂದಲೂ ಆರಾಧಿಸುತ್ತಿದ್ದ ವ್ಯಕ್ತಿಯೇ ಅವನೆಂದು ತಿಳಿದಾಗ ಅವನನ್ನು ಏನಾದರೂ ಮಾಡಿ ಹೇಗಾದರೂ ಮಾಡಿ ಹೊಂದಿಯೇ ತೀರಬೇಕೆಂಬ ಬಲವಾದ ಆಕಾಂಕ್ಷೆ-ಅದನ್ನು ಸಾಧಿಸಲು ಮಾಡುವ ಅವಳ ಪ್ರಯತ್ನ–ಇವಿಷ್ಟೂ ಠಾಕೂರರ ನಾಟಕದ ವಸ್ತು. ಈ ನಾಟಕದ ವಸ್ತು ಪೌರಾಣಿಕವೇ ಆದರೂ ಠಾಕೂರರ ಕೃತಿ ಸ್ವತಂತ್ರವೋ ಎನ್ನುವಷ್ಟರ ಮಟ್ಟಿಗೆ ಸ್ವತಂತ್ರರೂಪ ತಳೆದಿದೆ.

ಕುವೆಂಪುರವರ ಚಿತ್ರಾಂಗದೆ ಕಾವ್ಯದ ಆರಂಭದಲ್ಲಿ ‘ಪುರುಷ ವೇಷ’ದಲ್ಲಿರುವವಳು ಕಾಡಿನಲ್ಲಿ ಧ್ಯಾನಾಸಕ್ತನಾಗಿದ್ದ ಪಾರ್ಥನನ್ನು ಕಂಡು ‘ಪೆಣ್ತನ’ದ ನಾಣನ್ನು ಅನುಭವಿಸುತ್ತಾಳೆ. ಅವಳನ್ನು ಕಂಡು ಪಾರ್ಥ “ಆರುನೀನೆಲೆ ತರುಣ ವೀರ? ನುಡಿ,ಅಂಜದಿರು, ನಾವು ಮುನಿವ ಮುನಿವರರಲ್ಲ!” ಎಂದು ನುಡಿದಾಗ ಚಿತ್ರಾಂಗದೆಗೆ ಪುರುಷತೆ ಹೆಡೆಯೆತ್ತಿ, ಸಭ್ಯ ನಡವಳಿಕೆಗಳನ್ನೆಲ್ಲಾ ಬಿಟ್ಟು ‘ಪ್ರತಿಸ್ಪರ್ಧಿಗೆ ವೀರಾ ಆಲಾಪ’ವನ್ನು ಹೇಳುವಂತೆ ಅವನೊಂದಿಗೆ ಒರಟಾಗಿ ಉತ್ತರಿಸುತ್ತಾಳೆ. ಅವಳ ಈ ನಡತೆಯನ್ನು ಕವಿ ‘ಆಟವಿಕಸ್ತ್ರೀ‘’ಯ ನಡತೆಯೆನ್ನುತ್ತಾನೆ. ನಂತರ ತನ್ನ ಗಂಡಸುತನಕೆ ತಾನೇ ಹೇಸಿದ ಚಿತ್ರಾಂಗದೆ, ತನ್ನ ಪಾಳೆಯಕೆ ಬಂದು, ತನ್ನ ನೆಚ್ಚಿನ ಸಖಿಯಿಂದ ‘ಪೆಣ್ತನಕೆ ತಂಗುವಂತೆ ಮೇಣ್ ಚೆಲ್ವರಳುವಂತೆ’ ಶೃಂಗರಿಸಿಕೊಂಡು ಎರಡನೆಯ ಬಾರಿಗೆ ಅರ್ಜುನನನ್ನು ಸಂಧಿಸಿ ಮನವೊಲಿಸಿಕೊಳ್ಳಲು ಹೋಗುತ್ತಾಳೆ. ರಾತ್ರಿಯ ಹೊತ್ತಿನಲ್ಲಿ ಬಂದ ಚಿತ್ರಾಂಗದೆಯನ್ನು ಕುರಿತು ಅರ್ಜುನ ಮತ್ತೊಮ್ಮೆ,

> “ಆರು ನೀನೆಲೆ ತರುಣಿ ? ಈ ರಾತ್ರಿ, ಈ ಘೋರ
> ವಿಪಿನದೊಳ್ ....
> ಮಾನವ ಸ್ತ್ರೀಯರ್ಗೆ ಈ ಬಾಳ್ವೆ ಸೋಜಿಗಂ!
> ಮೇಣ್ ಸದ್ವಂಶಜಾತರಿಗೆ ತಗುವುದಲ್ತು!

ಎಂದು ನುಡಿಯುವುದಲ್ಲದೆ, ಅವಳ ಸೌಂದರ್ಯವನ್ನು ಹಳಿದು “ಬಿತ್ತರದ ಲೋಕದೊಳ್ ಕೇವಲ ಕನಿಷ್ಠರೆನೆ ನಿನಗಿಂತಲುತ್ತಮರ್!” ಎನ್ನುತ್ತಾನೆ. ಇದರಿಂದ ಚಿತ್ರಾಂಗದೆಗೆ ಅಪಾರ ಕೋಪ ಬಂದರೂ ಕೋಪ ಪ್ರದರ್ಶಿಸುವುದರಿಂದ ಎಲ್ಲಿ ತನ್ನ ಪುರುಷ ವ್ಯಕ್ತಿತ್ವ ಪ್ರದರ್ಶಿತವಾಗುತ್ತದೋ ಎಂದು ಹೆದರುತ್ತಾಳೆ.

ಚಿತ್ರಾಂಗದೆ ಸೌಂದರ್ಯದ ಅಧಿದೇವತೆಯಾದ ಮದನನಿಗೆ ಅರ್ಜುನನಿಂದ ತನಗಾದ ಅಪಮಾನವನ್ನು ತಿಳಿಸಿ ಒಂದು ದಿನಕ್ಕಾದರೂ ‘ರತಿಯ ರಮಣೀಯತೆ’ಯನ್ನು ದಯಪಾಲಿಸೆಂದು ಕೇಳಿಕೊಳ್ಳುತ್ತಾಳೆ. ಹೀಗೆ ಮದನನಿಂದ ಒಂದು ತಿಂಗಳಕಾಲ ಚೆಲುವಿನ ವರವನ್ನು ಪಡೆದ ಚಿತ್ರಾಂಗದೆ ಅರ್ಜುನನ್ನು ಆಕರ್ಷಿಸುವಲ್ಲಿ ಸಫಲಳಾಗುತ್ತಾಳೆ. ತನ್ನ ಇತಿಹಾಸವನ್ನು ಸಂಪೂರ್ಣವಾಗಿ ವರದಿಮಾಡುವ ಅರ್ಜುನ, ಚಿತ್ರಾಂಗದೆಯ ಹೆಸರು ಕುಲಗೋತ್ರಗಳನ್ನು ವಿಚಾರಿಸಿದಾಗ ಅವಳ ಉತ್ತರ ಹೀಗಿದೆ :

> “ಹೆಸರೇಕೆ, ಓ ಎನ್ನ ಎದೆಯನ್ನ ?
> ಬಿಸಿಲ ಬೇಗೆಗೆ ಬಳಲಿ ದಾರಿ ಬಳಿ ತೋಂಟದಲಿ
> ಸ್ವಾದು ಚೂತದ ಫಲವ ಕೊಯ್ದುಂಬವಂಗೇಕೆ
> ಹೊಲದ ಹೆಸರಿನ ಗೊಡವೆ? ಓ ಎನ್ನ ಉಸಿರೊಲವೆ
> ತನಿವಣ್ಣನುಂಡು ಸವಿ! ಯಾರಾದರೇನಂತೆ ನಾಂ”

ಅಂತೂ ತಾನು ಅರ್ಜುನನ ಭೋಗವಸ್ತುವೆಂದು ಸೂಚಿಸುತ್ತಾಳೆ. ಅಷ್ಟೇ ಅಲ್ಲ,

> ಫಲದ ಸಾಫಲ್ಯಕ್ಕೆ ಸುಮದ ಸೌಂದರ್ಯ ಬಲಿ
> ತಾನಂತೆ ಬಲಿಯುಹುದು ನೀರ ನೀರೆಯರೊಲುಮೆ
> ಕಂದನಾನಂದಕೆ.

ದರಲ್ಲಿಯೂ ಅನುಭವವಿಲ್ಲದವರಿಂದೂ ಅಪವಾದ ಉಂಟಾಗಿದೆಯಷ್ಟೆ? ಅದನ್ನು ತಪ್ಪಿಸಲೆಂದೇ' ನಂದಿನಿ ಹುಟ್ಟಿತು. ಸ್ತ್ರೀಯರ ಏಳಿಗೆಯನ್ನು ಗಮನದಲ್ಲಿಟ್ಟುಕೊಂಡು ತನ್ನದೆ ಆದ ರೀತಿಯಲ್ಲಿ ಮೂರು ವರ್ಷಗಳು ದುಡಿದ ನಂದಿನಿ 'ಪ್ರಕಟಗೊಳಿಸಬೇಕಾದ ಇನ್ನೂ ಅನೇಕ ವಿಚಾರಗಳಿದ್ದರೂ ಶಕ್ತ್ಯಭಾವ ಸಂಪದಭಾವ'ಗಳಿಂದ ವಿರಮಿಸಬೇಕಾಯಿತು. ಆದರೆ 'ಕರ್ನಾಟಕ ನಂದಿನಿ'ಯೊಂದಿಗೆ ತಿರುಮಲಾಂಬ ಪತ್ರಿಕಾರಂಗದಿಂದ ಕಣ್ಮರೆಯಾಗಲಿಲ್ಲ. 1922ರಲ್ಲಿ 'ಸನ್ಮಾರ್ಗದರ್ಶಿ'ಯೆಂಬ ಮತ್ತೊಂದು ಪತ್ರಿಕೆಯನ್ನು ಪ್ರಾರಂಭಿಸಿದರು. ಎಳೆಯರಿಗೆ 'ಸನ್ಮಾರ್ಗ'ವನ್ನು 'ದರ್ಶಿಸು'ವುದು ಈ ಪತ್ರಿಕೆಯ ಮುಖ್ಯ ಉದ್ದೇಶವಾಗಿತ್ತು. ಎರಡು ವರ್ಷ ನಡೆದ ಈ ಪತ್ರಿಕೆ 'ಕರ್ನಾಟಕ ನಂದಿನಿ' ನಿಂತ ಕಾರಣಗಳಿಂದಲೇ ನಿಲ್ಲಬೇಕಾಯಿತು.

ಪ್ರಕಾಶನದ ಸಿಹಿಕಹಿಗಳನ್ನು ಕಂಡ ಮೊದಲ ಕನ್ನಡತಿ ನಂಜನಗೂಡು ತಿರುಮಲಾಂಬ. 1913ರಲ್ಲಿ 'ಸತೀ ಹಿತೈಷಿಣೀ' ಗ್ರಂಥಮಾಲೆಯ ಪ್ರಕಾಶನ ಕಾರ್ಯವನ್ನು ಕೈಗೆತ್ತಿಕೊಂಡರು. ತಮ್ಮ ಕೃತಿಗಳನ್ನೇ ಅಲ್ಲದೇ ಅವರು ಬೇರೆ ಬರಹಗಾರರ ಅನುವಾದ, ಕಾವ್ಯ. ನಾಟಕ, ಮೊದಲಾದ ಕೃತಿಗಳನ್ನು ಹೊರತಂದರು. 'ತಪಸೀ ಕಲ್ಯಾಣ', 'ವಿಮಲಾದೇವಿ', 'ರಘುನಾಥಸಿಂಹ', ಮೊದಲಾದ ಅನೇಕ ಕೃತಿಗಳನ್ನು ಸತೀಹಿತೈಷಿಣೀ ಗ್ರಂಥಮಾಲೆ ಪ್ರಕಟಿಸಿದೆ. ತಿರುಮಲಾಂಬ ಅವರ ಪ್ರಕಾಶನೋದ್ಯಮದ ಸಾಹಸವನ್ನು ಮನವರಿಕೆ ಮಾಡಿಕೊಳ್ಳಲು ಅವರ ಪತ್ರಸಂಗ್ರಹದ ಮೇಲೊಮ್ಮೆ ಕಣ್ಣಾಡಿಸಬೇಕು. ಸಾಲಪಡೆಯಲು, ಸಾಲತೀರಿಸಲು, ಪುಸ್ತಕಗಳನ್ನು ಶಾಲಾ ಗ್ರಂಥಾಲಯಗಳಿಗೆ ಹಾಕಿಸಲು, ಪಠ್ಯಪುಸ್ತಕಗಳನ್ನಾಗಿಸಲು ಅವರು ಮಾಡಿದ ಹೋರಾಟದ ಕಥೆಯನ್ನು ಈ ಪತ್ರಗಳು ಹೇಳುತ್ತವೆ.

ಅವರು ಕೆಲಸ ಮಾಡುತ್ತಿದ್ದಾಗ ಮದ್ರಾಸಿನ ಪಠ್ಯಪುಸ್ತಕ ಮತ್ತು ಸಾಹಿತ್ಯಸಂಘದಿಂದ, ಧಾರವಾಡದ ವಿದ್ಯಾವರ್ಧಕ ಸಂಘದಿಂದ, ಕೃಷ್ಣರಾಜ ಒಡೆಯರಿಂದ ತಿರುಮಲಾಂಬರ ಕೃತಿಗಳಿಗೆ ಬಹುಮಾನಗಳು ದೊರೆತವು. ಮೈಸೂರು ಮತ್ತು ಮದ್ರಾಸ್ ವಿಶ್ವವಿದ್ಯಾನಿಲಯಗಳಲ್ಲಿ ಅವರ ಪುಸ್ತಕಗಳು ಪಠ್ಯಪುಸ್ತಕಗಳಾದವು. ಹೀಗೆ ಅಷ್ಟಿಷ್ಟು ಉತ್ತೇಜನ ಸಿಕ್ಕರೂ ಅಂದಿನ ವಾತಾವರಣ ಅವರ ಉತ್ಸಾಹ ಮತ್ತು ಬರವಸೆಗಳನ್ನು ಕುಗ್ಗಿಸಿದವು. 'ಭಕ್ತಿಗೀತಾವಲಿ'ಯ ಪ್ರಕಟನೆಯನ್ನು ಹೊರತುಪಡಿಸಿದರೆ 1948ರ ವೇಳೆಗೆ ಅವರ ಬರಹ ಮತ್ತು ಪ್ರಕಾಶನ ಕಾರ್ಯ ಹೆಚ್ಚುಕಡಿಮೆ ಸ್ಥಗಿತಗೊಂಡಿತು. ಕನ್ನಡಿಗರು ತಿರುಮಲಾಂಬ ಅವರ ಸಾಧನೆಗಳನ್ನು ಮರೆತಿರಲಿಲ್ಲ: 1979ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತೂ 1980ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯೂ ಅವರನ್ನು ಗೌರವಿಸಿದವು. ತಿರುಮಲಾಂಬರ ಸಾಧನೆಗಳು ನಮ್ಮ ನಾಡಿನ ಸಾಮಾಜಿಕ, ಸಾಹಿತ್ಯಕ ಇತಿಹಾಸದ ಒಂದು ಭಾಗವೆಂಬ ವಸ್ತುನಿಷ್ಠ ತಿಳಿವಳಿಕೆ, ನೆನಕೆಯೇ ಅವರೆಲ್ಲ ದುಡಿಮೆಗೆ ಸಲ್ಲಬೇಕಾದ ನಿಜವಾದ ಪ್ರಶಸ್ತಿ. ●

ಕವಿವರ್ಯರು ಚಿತ್ರಿಸಿದ "ಚಿತ್ರಾಂಗದೆ"

★ ಆಶಾ

"ಸ್ತ್ರೀ ಪುರುಷರ ಪ್ರೇಮದ ಕಥೆಯೇ ಮಾನವ ಸಂಸ್ಕೃತಿಯ ಸರ್ವಶ್ರೇಷ್ಠ ಸತ್ಯವೆಂದು ಹೇಳಿದವರು ನಿಜವಾದ ಸತ್ಯವನ್ನು ಅರಿತಿದ್ದಾರೆ. ಮಕ್ಕಳಿಗಾಗಿ ಹೆಂಡತಿಯ ಅವಶ್ಯಕತೆಯಿದೆಯೆಂದು ಹೇಳಿದವರು ಸ್ತ್ರೀಯರ ಅಪಮಾನ ಮಾಡಿದ್ದಷ್ಟೇ ಅಲ್ಲ, ತಮ್ಮ ಉನ್ನತಿಯನ್ನು ಪತನಗೊಳಿಸಿಕೊಂಡರು. ಮಾತೃತ್ವದಲ್ಲೇ ಸ್ತ್ರೀಯರ ಸಾರ್ಥಕತೆಯಿದೆಯೆಂದು ಪ್ರಚಾರಮಾಡಿದವರು ಸ್ತ್ರೀಜಾತಿಗೆ ಮೋಸ ಮಾಡಿದ್ದಾರೆ." ಶರತ್‌ಚಂದ್ರ ಚಟರ್ಜಿಯವರು ಒಂದು ಕಡೆ ನುಡಿದಿರುವ ಈ ಮಾತುಗಳನ್ನು ಮೆಲಕು ಹಾಕುವಾಗ ನಮ್ಮ ಕವಿವರ್ಯರಿಬ್ಬರು ಚಿತ್ರಿಸಿರುವ ಸ್ತ್ರೀ ಪಾತ್ರವೊಂದು ನೆನಪಿಗೆ ಬರುತ್ತವೆ : ನಮ್ಮ ಭಾರತದ ಸಾಹಿತ್ಯ ಸಂದರ್ಭದ ರವೀಂದ್ರನಾಥಟಾಗೋರ್ ಮತ್ತು ಕುವೆಂಪುರವರು; ಅವರ ಕೃತಿಗಳಾದ 'ಚಿತ್ರಾ' ಮತ್ತು 'ಚಿತ್ರಾಂಗದ'.

ಎನ್ನುವ ಚಿತ್ರಾಂಗದೆ ಕಡೆಗೆ ಅರ್ಜುನನಿಂದ ಬಯಸುವುದು ತಾಯ್ತನದ ಪಟ್ಟವನ್ನಷ್ಟೆ. "ತಾರುಣ್ಯದ ಸಂಯಮರಹಿತ ವ್ರತಭ್ರಷ್ಟತೆಗೆ ಪ್ರಾಯಶ್ಚಿತ್ತವಿಹೀನವಾದ ಭೋಗ ಕಿರೀಟವನ್ನಿಟ್ಟು ಪ್ರೇಮದ ಮಂಗಳಾರತಿ" ಎತ್ತದಂತೆ ಮಾಡಲು ಹೊರಟಿರುವ ಕುವೆಂಪುರವರ ಪ್ರಯತ್ನವಿದೆಂಬುದನ್ನು ಅವರೇ ಸ್ಪಷ್ಟಪಡಿಸಿಕೊಂಡಿದ್ದಾರೆ.

ಇನ್ನು ಠಾಕೂರರ ಚಿತ್ರಾಂಗದೆಯನ್ನು ನೋಡೋಣ. ಠಾಕೂರರ ಕೃತಿ 'ಚಿತ್ರಾ' ನಾಟಕವಾದ್ದರಿಂದ ಕುವೆಂಪುರವರು ಬಳಸುವ ತಂತ್ರಗಳನ್ನು ಬಳಸದೆ, ನೇರವಾಗಿ ಚಿತ್ರಾಂಗದೆ ಮತ್ತು ಮದನನ ಸಂಭಾಷಣೆಯ ಮೂಲಕವೇ ಚಿತ್ರಾಂಗದೆಯ ವ್ಯಕ್ತಿತ್ವವನ್ನು ನಮ್ಮ ಮುಂದಿಡುತ್ತಾರೆ. ಠಾಕೂರರ ಚಿತ್ರಾಂಗದೆ ತಾನು ಪುರುಷನಾಗದೆ ಸ್ತ್ರೀಯಾಗಿ ಹುಟ್ಟಿರುವುದು ತನ್ನ ಪ್ರಾರಬ್ಧದಿಂದ ಎನ್ನುತ್ತಾಳೆ; ಸ್ತ್ರೀಯ ಯಾವ ಗುಣಗಳು ತನಗಿಲ್ಲದುದಕ್ಕೆ ವ್ಯಥೆ ಪಡುತ್ತಾಳೆ. ತಾನಾಗಿಯೇ ದಾರಿಯಲ್ಲಿ ಅಡ್ಡವಾಗಿ ಸಿಕ್ಕಿದ ವಲ್ಕಲಧಾರಿ ಪಾರ್ಥನನ್ನು ಕಂಡು 'ದಾರಿ ಬಿಟ್ಟು ದೂರ ಸರಿ' ಎಂದು ತಿರಸ್ಕಾರದಿಂದ ಸಹಜವಾಗಿ ನುಡಿಯುತ್ತಾಳೆ. ಅವನಾರೆಂದು ವಿಚಾರಿಸಿದಾಗ, ಅವನು "ನಾನು ಪಾರ್ಥ, ಕುರುವಂಶಧರ" ಎಂದಾಗ ಚಿತ್ರದ ಗೊಂಬೆಯಂತೆ ನಿಂತು ಬಿಡುತ್ತಾಳೆ. ಚೇಷ್ಟೆ ಮಾಡಿ ನಿಂದಿಸಿ ಪಾರ್ಥ ಅವಳನ್ನು ಲೆಕ್ಕಿಸದೇ ನಡೆದುಬಿಟ್ಟಾಗ ನೋಯುತ್ತಾಳೆ. ಬಾಲ್ಯದಲ್ಲಿ ತನ್ನ ಸ್ವಂತ ಭುಜಬಲದಿಂದ ಪಾರ್ಥನ ಕೀರ್ತಿ ಕುಂದಿಸುವೆನೆಂದು ಆಶಿಸುತ್ತಿದ್ದ, ಛದ್ಮ ಪುರುಷ ವೇಷದಿಂದ ಆತನೊಡನೆ ಸಂಗ್ರಾಮ ಬೇಡಿ, ತನ್ನ ವೀರತ್ವದ ಪರಿಚಯ ಮಾಡಿಕೊಟ್ಟು ಸಾರ್ಥಕ ಧ್ಯೇಯವನ್ನು ಸಾಧಿಸಬೇಕೆಂದಿದ್ದ ಚಿತ್ರಾಂಗದೆ, ಅರ್ಜುನ ಅವಳ ರೂಕ್ಷತೆಗೆ ಹೇಸಿ ಅವಳನ್ನು ತಿರಸ್ಕರಿಸಿ ಹೊರಟಾಗ ಸ್ತ್ರೀಯ ವೇಷದಿಂದ, ಸ್ತ್ರೀಯ ಸೌಂದರ್ಯದಿಂದಲಾದರೂ ಅವನನ್ನು ಒಲಿಸಿಕೊಳ್ಳುವತ್ತ ಮನಸ್ಸು ಮಾಡುತ್ತಾಳೆ. ಹಾಗೆಯೇ ಮದನನ ವರದಿಂದ ಒಂದು ಸಂವತ್ಸರ ಕಾಲದ ಸೌಂದರ್ಯ ಪಡೆಯುತ್ತಾಳೆ.

ಠಾಕೂರರ ಚಿತ್ರೆ ಅಲ್ಪಕಾಲಿಕ ಆವೇಶದಲ್ಲಿರುವುದು ಕವಿ ಅವಳನ್ನು ಮಂಜು ಹಸಿಗೆ ಹಾಗೂ ಹೂವಿಗೆ ಹೋಲಿಸಿರುವುದಲ್ಲಿ ಸ್ಪಷ್ಟವಾಗುತ್ತದೆ. ಅವಳಿಗೆ ಅರ್ಜುನ ತನ್ನನ್ನು ಅಗಲಬೇಕಾದ ಸಮಯ ಬಂದಾಗ ಮದನನ ಕೃಪೆಯಿಂದ ತನಗೊದಗಿರುವ ಕೃತಕ ಸೌಂದರ್ಯದಿಂದ ವ್ರತಧಾರಿ ಅರ್ಜುನನ್ನು ಕೆಡಿಸಿದನಲ್ಲ, ಅವನಿಗೆ ತನ್ನ ಸುಳ್ಳು ವ್ಯಕ್ತಿತ್ವವನ್ನು ಪ್ರದರ್ಶಿಸಿದನಲ್ಲಾ ಎಂಬ ದುಃಖ ಕಾಡುತ್ತದೆ. ಆಗ ಅವಳು "ಈ ಛದ್ಮ ರೂಪಿಣಿಗಿಂತ ಆ ಸರಳೆಯಾದ ನಾನು ಶತಗುಣ ಶ್ರೇಷ್ಠೆಯು. ನನ್ನ ನಿಜ ಸ್ವರೂಪವನ್ನು ಪ್ರಕಾಶ ಮಾಡುವೆನು. ಅವನು ಅದನ್ನು ಮೆಚ್ಚದಿದ್ದರೆ, ಘೃಣಭರದಿಂದ ನನ್ನನ್ನಾತನು ಬಿಟ್ಟು ನಡೆದುದೇ ಆದರೆ ಅದನ್ನು ಸಹಿಸಬಲ್ಲೆನು. ಹೇ ಇಂದ್ರಸಖ ! ಅದೇ ಮೇಲು" ಎಂದು ಸಮಾಧಾನಪಟ್ಟುಕೊಳ್ಳುತ್ತಾಳೆ. ಚಿತ್ರಾಂಗಡೆ ತನ್ನಿಂದ ಏನನ್ನೋ ಮುಚ್ಚಿಡುತ್ತಿದ್ದಾಳೆ, ಎಂದು ಅರಿವಾದೊಡನೆ ಅರ್ಜುನ, "ಯಾವುದು ಸತ್ಯವೋ ಅದನ್ನು ನನಗೆ ಕೊಡು" ಎನ್ನುತ್ತಾನೆ. ಆಗ ತನ್ನ ವೈಯಕ್ತಿಕ ವಿಚಾರಗಳನ್ನು ವಿವರವಾಗಿ ಪ್ರಕಟಿಸುವ ಚಿತ್ರಾಂಗದೆ, "ಹೇ ನಾಥ, ಯಾವ ಪುಷ್ಪದಿಂದ ಇಂದಿನವರೆಗೆ ಪೂಜೆ ಮಾಡುತ್ತಿದ್ದೆನೋ ಸಂಪೂರ್ಣ ಆದರಂತೆ, ಅಷ್ಟು ಸುಮಧುರ, ಅಷ್ಟು ಸುಕೋಮಲ, ಅಷ್ಟು ಸುಂದರಿಯು ನಾನಲ್ಲ. ನನ್ನಲ್ಲಿ ದೋಷವಿದೆ, ಗುಣವಿದೆ, ಪಾಪವಿದೆ, ಪುಣ್ಯವಿದೆ, ಆ ಜನ್ಮದ ಎಷ್ಟೋ ಅತೃಪ್ತ ತೃಷ್ಣೆವಿದೆ." ಎನ್ನುತ್ತಾಳೆ. ಅವಳ ಜಾಗೃತವಾದ ಆತ್ಮಾಭಿಮಾನವನ್ನು ಗುರುತಿಸಬಹುದು. "ನನ್ನಲ್ಲಿ ಅಕ್ಷಯವಾದ ರಮಣೀಯ ಹೃದಯವೊಂದಿದೆ" ಎನ್ನುತ್ತಾಳೆ.

ಎರಡೂ ಕೃತಿಗಳ ಚಿತ್ರಾಂಗದೆಯರ ಬಗ್ಗೆ ಮೌಲಿಕ ಚಿಂತನೆ ನಡೆಸಿದಾಗ ಠಾಕೂರರ ಚಿತ್ರೆ ಹೆಚ್ಚು ಆರೋಗ್ಯಪೂರ್ಣ ಸ್ತ್ರೀಯಾಗಿ ಚಿತ್ರಿತವಾಗಿರುವುದನ್ನು ಗಮನಿಸಬಹುದು. ಕುವೆಂಪುರವರ ಚಿತ್ರಾಂಗದೆ ಅರ್ಜುನನಿಗೆ, "ಈ ವಿಜನ ವಿಪಿನದಲಿ, ನಿನ್ನ ಕ್ರೀಡಾವಸ್ತುವಾಗಿರ್ದು ಬೇಸರಾಸರ್ಗಳೆದು ಹಗಲಿರುಳು ನಿನ್ನೊಡನೆ ನಲಿದಾಡಿದೀ ದೀನಕಾನನ ಪ್ರಸೂನಮಂ, ಹೇ ಕಾಂತ ಮರೆಯದಿರು; ತೊರೆಯದಿರು !" ಎನ್ನುತ್ತಾಳೆ. ಅದೇ ಠಾಕೂರರ ಚಿತ್ರಾಂಗದೆಯಾದರೋ, "ನನ್ನನ್ನು ಸಂಕಟ ಪ್ರಸಂಗಗಳಲ್ಲಿ ನಿನ್ನ ಒಂದು ಪಾರ್ಶ್ವದಲ್ಲಿರಿಸಿದರೆ ... ನಿನ್ನ ಕಠಿಣವ್ರತದಲ್ಲಿ ಸಹಕಾರಿಣಿಯಾಗಲು ಅನುಮತಿಯನ್ನೀಯುವುದಾದರೆ, ಸುಖದಲ್ಲಿಯೂ, ದುಃಖದಲ್ಲಿಯೂ

(18 ಪುಟ ನೋಡಿ)

‘ಸಾಮಾಜಿಕ ದೃಷ್ಟಿಕೋನ ಬದಲಾಗಬೇಕು’

74ನೇ ‘ಭಾರತೀಯ ವಿಜ್ಞಾನ ಕಾಂಗ್ರೆಸ್ಸಿ’ನ ಅಧ್ಯಕ್ಷರಾದ ಪ್ರೊ|| ಅರ್ಚನಾ ಶರ್ಮಾ ಕಲ್ಕತ್ತಾ ವಿಶ್ವವಿದ್ಯಾನಿಲಯದ ‘ಜೆನಿಟಿಕ್ಸ್’ ವಿಭಾಗದಲ್ಲಿದ್ದಾರೆ. ಮೂರು ದಶಕಕ್ಕೂ ಹೆಚ್ಚು ಕಾಲ ‘ವರ್ಣತಂತು’ ಗಳ ಬಗ್ಗೆ ಆಳ ಅಧ್ಯಯನ ಮಾಡುತ್ತಿರುವ ಅರ್ಚನ ಶರ್ಮಾರವರು ಹಲವಾರು ಪ್ರಶಸ್ತಿಗಳ ಪಡೆದ ಮೇಧಾವಿ ವಿಜ್ಞಾನಿ. ಇವರ 350ಕ್ಕೂ ಹೆಚ್ಚು ಮೂಲಪ್ರಬಂಧಗಳು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಸದಾ ನಗುಮುಖದ ಅರ್ಚನಾ ಶರ್ಮಾ ಮೊದಲ ಭೇಟಿಯಲ್ಲೇ ಆತ್ಮೀಯರಾಗುವ ಸಹೃದಯಿ. ಕಡೆಯ ದಿನದ ಸಮಾರಂಭದ ಗಡಿಬಿಡಿ ಮಧ್ಯೆ ಪಾದರಸದಂತೆ ಓಡಾಡುತ್ತಿದ್ದ ಪ್ರೊ|| ಅರ್ಚನಾ ಶರ್ಮಾ ವಿಪರೀತ ಚಟುವಟಿಕೆಯ ಮಧ್ಯೆಯೇ ‘ಅಚಲ’ಗೆ ಸಂದರ್ಶನ ನೀಡಿದರು. ಅದರಲ್ಲಿ ಆಯ್ದ ಭಾಗ.



ಚಿತ್ರ : ರಾಧಿಕಾ

ಅಚಲ : ವಿಜ್ಞಾನ, ತಂತ್ರಜ್ಞಾನವನ್ನು ಆರಿಸಿಕೊಳ್ಳುವ ಹುಡುಗಿಯರ ಸಂಖ್ಯೆ ಇಂದಿಗೂ ಗಮನಾರ್ಹವಾಗಿ ಕಡಿಮೆಯೇ ಇದೆಯಲ್ಲ, ಏಕೆ ?

ಪ್ರೊ|| ಅ. ಶ. : ಹಾಗೇನೂ ಇಲ್ಲ. ನನ್ನ ಕಾಲದಿಂದ ನಿಮ್ಮ ಕಾಲಕ್ಕೆ ನೋಡಿದರೆ ವಿಜ್ಞಾನ ತೆಗೆದುಕೊಳ್ಳುತ್ತಿರುವ ಹುಡುಗಿಯರ ಸಂಖ್ಯೆ ದಿನೇ ದಿನೇ ಬೆಳೆದು ತಾನೇ ಬಂದಿದೆ. ಈಗಂತೂ ಇಂಜನಿಯರಿಂಗ್‌ನಲ್ಲೂ ಧಾರಾಳವಾಗಿ ವಿಧ್ಯಾರ್ಥಿನಿಯರಿದ್ದಾರೆ. ಆದರೂ ನಮ್ಮ ಭಾರತದ ಜನಸಂಖ್ಯೆಯಲ್ಲಿ ಅಕ್ಷರಸ್ತರ ಸಂಖ್ಯೆಯೇ ಮೊದಲು ಕಡಿಮೆ ಇದೆ. ಈ ಅಕ್ಷರಸ್ತರಲ್ಲಿ ಮಹಿಳೆಯರು ಎಷ್ಟು ಮಂದಿ ಇದ್ದಾರು ? ಹೆಚ್ಚು ಹುಡುಗಿಯರಿಗೆ ಓದು ಕೇವಲ ಮ ದು ವೆ ಯ ವ ರೆ ಗಿ ನ ‘stop-gap’ ವ್ಯವಸ್ಥೆ. ಅಂದಮೇಲೆ ಉನ್ನತ ವ್ಯಾಸಂಗದಲ್ಲಿ ಹೆಚ್ಚು ಮಹಿಳೆಯರನ್ನು ನಿರೀಕ್ಷಿಸಲು ಸಾಧ್ಯವಿಲ್ಲ.

ಅಚಲ : ಅದು ಸರಿ, ಆದರೂ ಎಸ್. ಎಸ್. ಎಲ್. ಸಿ. ಹಂತದವರೆಗೂ ಬಂದ ಹುಡುಗಿಯರಲ್ಲಿ ಮುಕ್ಕಾಲು ಪಾಲು ‘ಆರ್ಟ್ಸ’ನ್ನೇ ಆಯ್ದುಕೊಳ್ಳುತ್ತಾರೆ. ವಿಜ್ಞಾನ, ತಂತ್ರಜ್ಞಾನದತ್ತ ಆಸಕ್ತಿ ತೋರಿಸುವ ಹುಡುಗಿಯರು ಕಡಿಮೆಯೆ. ಇದೇನಾದರೂ ಮಹಿಳೆಯರಿಗೆ ’spatial ability’ ಕಡಮೆ ಎಂಬ ಜೀವಶಾಸ್ತ್ರೀಯ ವಾದಗಳ ಪುರಾವೆಯೆ ? ಹೆಂಗಸರ ಬೌಧಿಕ ಕೊರತೆಯನ್ನೇನಾದರೂ ತೋರುತ್ತಿದೆಯೇ ?

ಪ್ರೊ|| ಅ. ಶ. : ಅವೆಲ್ಲ ಪೊಳ್ಳುವಾದಗಳು. ಹೆಂಗಸರು ವಿಜ್ಞಾನಿಗಳಾಗಲೂ ಸಮರ್ಥರಲ್ಲ ಎಂಬುದೆಲ್ಲ ಬರೀ ಸುಳ್ಳು. ಮೇರಿ ಕ್ಯೂರಿ ದಶಕಗಳ ಹಿಂದೆಯೇ ಸ್ತ್ರೀ ಸಾಮರ್ಥ್ಯವನ್ನು ಸಮರ್ಥಿಸಿ ತೋರಿಸಿದ್ದಾಳೆ.

ಅವಳ ಮಗಳೂ ಅದನ್ನೇ ಪುನರ್ ಸಮರ್ಥಿಸಿದ್ದೂ ಆಗಿವೆ. ಇದು ಏನಿದ್ದರೂ ಸಮಾಜದ ಪೂರ್ವಾಗ್ರಹ ಪೀಡಿತ ಮನೋಭಾವವನ್ನು ಪ್ರತಿಫಲಿಸುತ್ತೆ. ಹುಡುಗಿಯರನ್ನು ಮದುವೆಗೆ ತಯಾರಿಸುವಲ್ಲಿ ತೋರುವ ಉತ್ಸಾಹ, ಆಕೆ ಬದುಕು ಎದುರಿಸುವಲ್ಲಿ, ಉದ್ಯೋಗ ಹಿಡಿಯುವಲ್ಲಿ, ವಿಜ್ಞಾನ ತಂತ್ರಜ್ಞಾನದಲ್ಲಿ ಆಸಕ್ತಿ ತಳೆಯುವಲ್ಲಿ ಕಾಣುವುದಿಲ್ಲ. ಸಮಾಜದ 'Pre-conditioning' ಮಹಿಳಾ ವಿಜ್ಞಾನಿಗಳ ಅಲ್ಪ ಸಂಖ್ಯೆಗೆ ಕಾರಣ.

ಅಚಲ : ನಮ್ಮ ಪಠ್ಯ ಪುಸ್ತಕಗಳೂ ವಿಜ್ಞಾನಕ್ಕೆ 'ಗಂಡು ಇಮೇಜ್' ಕೊಟ್ಟಿವೆ. ವಿಜ್ಞಾನಕ್ಕೆ ಸಂಬಂಧ ಪಟ್ಟ ಬಹಳಷ್ಟು ಚಿತ್ರಗಳಲ್ಲಿ ಹುಡುಗರನ್ನೇ ಪ್ರಮುಖವಾಗಿ ಚಿತ್ರಿಸುವುದು ಕಾಣಬಹುದು.

ಪ್ರೊ|| ಅ. ಶ. : ಹೌದು ಪಠ್ಯಕ್ರಮದಲ್ಲೂ ಸಾಕಷ್ಟು ಸುಧಾರಣೆ ಬೇಕು. ವಿಜ್ಞಾನವನ್ನು ಬದುಕಿಗೆ ಹತ್ತಿರವಾಗುವಂತೆ ಬೋಧಿಸಬೇಕು.

ಅಚಲ : ಮಹಿಳೆ ವಿಜ್ಞಾನ ರಂಗದಲ್ಲಿ ಎದುರಿಸುವ ಸಮಸ್ಯೆಗಳೇನು ?

ಪ್ರೊ|| ಅ. ಶ. : ನಿಜವಾದ ಅರ್ಹತೆ, ಯೋಗ್ಯತೆಗಳಿದ್ದಾಗ ಆಕೆ ಸಹಜವಾಗಿಯೇ ವೃತ್ತಿರಂಗದಲ್ಲಿ ಮೇಲೆ ಬರಬಲ್ಲಳು. ಆದರೆ ಮನೆಯವರ ಸಹಕಾರವು ಅಗತ್ಯ. ನಮ್ಮ ಕಾಲದಲ್ಲಿ ನನಗೆ ವಿಜ್ಞಾನ ಅತ್ಯಂತ ಆಸಕ್ತಿಯ, ಖುಷಿಯ ವಿಷಯವಾಗಿತ್ತು. ಇಂದು ಅದು ಹೆಣ್ಣಿಗೆ ಅನಿವಾರ್ಯ ಉದ್ಯೋಗವಾಗಿದೆ. ಹಾಗೆಂದು ಮನೆಯ ಕೆಲಸವೇನೂ ಕಡಿಮೆಯಾಗಿಲ್ಲ. ಎರಡೂ ಹೊರೆಗಳೂ ಮೇಲೆ ಬಿದ್ದಿವೆ. ಮನೆಗೆಲಸವೆಲ್ಲ ಹೆಣ್ಣಿನದೇ ಎಂದು ಮೊದಲಿಂದ ತಲೆಗೆ ತುಂಬುವ ನಮ್ಮ ಸಂಪ್ರದಾಯ ಬದಲಾಗಬೇಕು.

ಅಚಲ : ವಿದೇಶಗಳಲ್ಲಿ SWE, GIST ನಂಥಾ ಹಲವು ಸಂಸ್ಥೆಗಳು, ಯೋಜನೆಗಳು, ವಿಜ್ಞಾನ ರಂಗದಲ್ಲಿಯ ಸ್ತ್ರೀಯರ ಸಮಸ್ಯೆಗಳ ಅಧ್ಯಯಿಸಿ, ಅವುಗಳ ಪರಿಹಾರಕ್ಕೆ ಗಂಭೀರ ಪ್ರಯತ್ನಗಳ ಮಾಡುತ್ತಿವೆ. ಇಂಥ ಯಾವ ಯೋಜನೆಗಳೂ ಭಾರತದಲ್ಲಿ ಇಲ್ಲನ ?

ಪ್ರೊ|| ಅ. ಶ.: ವಿದೇಶಗಳ ವಿಧಾನಗಳ ನೇರವಾಗಿ ಭಾರತಕ್ಕೆ ಅಳವಡಿಸಲು ಹೋಗಬಾರದು. ಇಲ್ಲಿಯ ಮಹಿಳೆಯರ ಸಮಸ್ಯೆಗಳು ಬೇರೆ ಇವೆ. ವಿದೇಶದಲ್ಲಿ ಸ್ತ್ರೀ ಹೋರಾಡಬೇಕಾದುದು ಪುರುಷನ ವಿರುದ್ಧ ಮಾತ್ರ. ಇಲ್ಲಿ ಮದುವೆಯಾದೊಡನೆ ಆಕೆ ಗಂಡು ಆತನ ಸಂಸಾರ ಎಲ್ಲವನ್ನೂ ಒಟ್ಟಿಗೇ ಕಟ್ಟಿಕೊಳ್ಳುತ್ತಾಳೆ. ಇಲ್ಲಿ ಒಟ್ಟು ಸಮಾಜದ ವ್ಯವಸ್ಥೆ ಎದುರಾಗುತ್ತದೆ. ಗಂಡು ಮಕ್ಕಳಿಗೆ ಅತಿ ಪ್ರಾಶಸ್ತ್ಯ ನೀಡಲಾಗುತ್ತೆ. ಹೆಣ್ಣಿಗೆ ತಾಯಿಯ ಸ್ಥಾನದಲ್ಲಿ ವಿಪರೀತ ಗೌರವ ನೀಡುವಂತೆ ಬೆಳೆಸಿದರೂ, ಹೆಂಡತಿಯ ಬಗ್ಗೆ ಆತನ ದೃಷ್ಟಿಕೋನ ಬೇರೆಯೇ ಇರುತ್ತದೆ. ತಾಯಿಯ ಬಗ್ಗೆ ಇರುವ ಗೌರವವನ್ನೇ ಮತ್ತೆಲ್ಲ ಮಹಿಳೆಯರ ಬಗ್ಗೆಯೂ ಮೂಡಿಸುವಂತೆ ಒತ್ತುಕೊಡಬೇಕು. ಆಗಷ್ಟೆ, ಪತ್ನಿಯ ಪ್ರತಿಭೆ, ಉದ್ಯೋಗವನ್ನು ಗೌರವಿಸಲು, ಸಹಕರಿಸಲು ಸಾಧ್ಯ.

ಅಚಲ : ವಂಶವಾಹಿನಿಯ ಸಂಶೋಧನೆಗಳು, ಇತ್ತೀಚೆಗೆ ವಿಪರೀತದ ಸಾಮಾಜಿಕ ಅಸ್ತವ್ಯಸ್ತಕ್ಕೆ ಕಾರಣವಾಗುತ್ತಿವೆ. ವೀರ್ಯದಲ್ಲಿಯ ವರ್ಣತಂತುಗಳ ಬೇರ್ಪಡಿಸಿ ಗಂಡು ಮಗುವನ್ನು ಪಡೆವ ತಂತ್ರ ಈಗಾಗಲೇ ಭಾರತದಲ್ಲೆಲ್ಲ ಹರಡಿದೆ.

ಪ್ರೊ|| ಅ. ಶ. : ಅವೆಲ್ಲ ಕೇವಲ ಹಣವಂತರ ಸವಲತ್ತುಗಳು. ಅಷ್ಟು ತೀವ್ರವಾಗಿ ಸಾಮಾಜಿಕ ಅವ್ಯವಸ್ಥೆಗೆ ಕಾರಣವಾಗಿಲ್ಲ.

ಅಚಲ : ಹಾಗಲ್ಲ, ಹತ್ತು-ಹದಿನೈದು ಸಾವಿರ ಬಹಳಷ್ಟು ಮಧ್ಯಮ ವರ್ಗದವರ ಕೈಗೆ ನಿಲುಕುವಂತೆಯೇ ಇದೆ. ಇಂಥ ಕ್ರಮಗಳ ಹದ್ದುಬಸ್ತಿಗೆ ಏನು ಮಾಡಬೇಕು ?

ಪ್ರೊ|| ಅ. ಶ : ಇದಕ್ಕೂ ಗಂಡು ಮಗುವೇ ಬೇಕು ಅನ್ನುವ ನಮ್ಮ ಸಾಮಾಜಿಕ ವ್ಯವಸ್ಥೆ ಕಾರಣ. ಜನರ ಒಟ್ಟು ಮನೋಭಾವ ಬದಲಾಗಬೇಕು. ಹೆಣ್ಣು ಕಡಿಮೆ ಅನ್ನೋ ಭಾವ ತೊಲಗಬೇಕು. ಹೆಣ್ಣು-ಗಂಡಿನ ನಡುವೆ ತಾರತಮ್ಯ ಇಲ್ಲದಾಗ, ಇಂಥ ಕ್ರಮಗಳು ನಿರುಪಯುಕ್ತವಾಗುತ್ತವೆ.

ಅಚಲ : ಹೆಚ್ಚು ಮಹಿಳೆಯರನ್ನು ವಿಜ್ಞಾನದತ್ತ ಆಕರ್ಷಿಸಲು ಏನು ಮಾಡಬೇಕು ?

ಪ್ರೊ. ಅ. ಶ. : ಮೀಸಲಾತಿಯಂತೂ ಖಂಡಿತಾ ನೀಡಬಾರದು. ಆಗ ಮಹಿಳಾ ವಿಜ್ಞಾನಿಗಳೆಂದರೆ ಎರಡನೇ ದರ್ಜೆಯವರಾಗಿಬಿಡುತ್ತಾರೆ. ಹೆಣ್ಣು ತನ್ನ ಯೋಗ್ಯತೆ, ಸಾಮರ್ಥ್ಯಗಳಿಂದ ಪ್ರತಿ ರಂಗದಲ್ಲೂ ಪುರುಷನಿಗೆ ಸರಿಸಮಾನವಾಗಿ ಪ್ರತಿಸ್ಪರ್ಧಿಸಿ ಗೆಲ್ಲಬಲ್ಲಳು. ತನ್ನ ಸ್ವಂತ ಸಾಮರ್ಥ್ಯದಿಂದ ಮುಂದೆ ಬರಲು, ಯಾರಲ್ಲೂ ಬೇಡಬೇಕಿಲ್ಲ. ಸಮಾಜದ ದೃಷ್ಟಿಕೋನವು ಸಾಕಷ್ಟು ಬದಲಾಗುತ್ತಿದೆ.

ಸಮಾಜ ಬದಲಾವಣೆಯಲ್ಲಿ ವಿಜ್ಞಾನಿಗಳ ಜೊತೆ, ಹುಡುಗಿಯರನ್ನು ವಿಜ್ಞಾನದತ್ತ ಆಕರ್ಷಿಸಲು ಪ್ರಾಥಮಿಕ ಮಟ್ಟದಲ್ಲಿ ನಡೆಯಬೇಕಾದ ಪ್ರಯತ್ನ, ಹೀಗೆ ಹಲವು ಪ್ರಶ್ನೆಗಳಿದ್ದರೂ, ಆಗಲೇ ಮುಂದಿನ ಕಾರ್ಯಕ್ರಮದ ವೇಳೆಯಾದ ಕಾರಣ ಪ್ರೊ|| ಅರ್ಚನಾ ಶರ್ಮಾ ನಗು ನಗುತ್ತಾ 'ಅಚಲ'ಗೆ ಬೀಳ್ಕೊಟ್ಟರು. ●

ವಿಜ್ಞಾನ ಮತ್ತು ಮಹಿಳೆ

● ನೇಮಿಚಂದ್ರ

ಇಪ್ಪತ್ತನೇ ಶತಮಾನದ ತುತ್ತತುದಿಯಲ್ಲೂ, ರೇಡಿಯೋ, ದೂರದರ್ಶನ, ಗಣಕಯಂತ್ರಗಳ ಮೂಲಕ ವಿಜ್ಞಾನ, ತಂತ್ರಜ್ಞಾನ ಮನೆ ಮನೆಗೆ ಧಾಳಿ ಇಟ್ಟರೂ, ವಿಜ್ಞಾನ ರಂಗದಲ್ಲಿ ಮಹಿಳೆಯರ ಸಂಖ್ಯೆ ಗಮನಾರ್ಹವಾಗಿ ಕಡಿಮೆಯೇ ಇದೆ. ಇಲ್ಲಿಯವರೆಗೂ ಬರೀ ಪುರುಷರೇ ಆವರಿಸಿದ್ದ, ಮಹಿಳೆಯರಿಗೆ ನಿಷೇಧಿತ ರಂಗಗಳಿಗೆಲ್ಲಾ ಹೆಣ್ಣು ದಿಟ್ಟ ಹೆಜ್ಜೆ ಇಕ್ಕಿರುವುದು ನಿಜವಾದರೂ, ಆಕೆಯಿನ್ನೂ ಅಪರೂಪದ ಅಪವಾದದಂತೆಯೇ ವೀಕ್ಷಿಸಲ್ಪಡುತ್ತಿದ್ದಾಳೆ. ಮಹಿಳೆ-ವಿಜ್ಞಾನ ವಿರೋಧಾಭಾಸದ ಪದಗಳೆಂಬಂತೆ, ಇಂದಿಗೂ ಮಹಿಳೆ ವಿಜ್ಞಾನ ಓದಲು ಅನರ್ಹಳೆಂಬ ಮೂಢನಂಬಿಕೆ ಸಾಕಷ್ಟು ಇದೆ. ಈ ಮೂಢನಂಬಿಕೆಗೆ ವೈಜ್ಞಾನಿಕ ಬಣ್ಣ ಬಳಿಯುವ ಪ್ರಯತ್ನಗಳೂ ನಡೆದಿವೆ. ಹತ್ತೊಂಬತ್ತನೇ ಶತಮಾನದ ಕೊನೆಯಲ್ಲಿ, ಹೆಚ್ಚು ಓದಿದ ಹೆಣ್ಣು ಬಂಜೆಯಾಗುತ್ತಾಳೆಂಬ ನಂಬಿಕೆ ಇತ್ತು. ವೈದ್ಯಕೀಯ ಸಿದ್ಧಾಂತಗಳ ಉಲ್ಲೇಖಿಸುತ್ತಾ ಮಹಿಳೆಯರನ್ನು ಉನ್ನತ ವ್ಯಾಸಂಗದಿಂದ ತಡೆಯುತ್ತಿದ್ದರು. ಮಹಿಳೆಯ ಉನ್ನತ ವಿದ್ಯಾಭ್ಯಾಸ ಆಕೆಯ ಸಂತಾನೋತ್ಪತ್ತಿ ವ್ಯವಸ್ಥೆಗೆ ಮಾರಕ ಎಂಬಂಥ ಸಿದ್ಧಾಂತಗಳನ್ನು ಡಾ|| ಇ. ಎಚ್. ಕ್ಲಾರ್‌ನ 'Sex in Education- The Limitations of the Female System' ನಂಥಾ ಪೂರ್ವಾಗ್ರಹ ಪೀಡಿತ ಪುಸ್ತಕಗಳಲ್ಲಿ ಕಾಣಬಹುದು. ಈ ಪುಸ್ತಕ ಅಂದಿನ ಸಮಾಜ, ವಿದ್ಯಾಸಂಸ್ಥೆಗಳಲ್ಲಿ, ಸ್ತ್ರೀ ವಿದ್ಯಾಭ್ಯಾಸದ ಬಗ್ಗೆ ಎಲ್ಲಿಲ್ಲದ ಭೀತಿಯನ್ನು ತುಂಬಿತ್ತು. ಸ್ತ್ರೀವಾದಿ ಹೋರಾಟಗಾರರು ವೈದ್ಯಕೀಯ ಸಹಾಯದಿಂದಲೂ, ಅಂಕಿ-ಸಂಖ್ಯೆ ಸಂಗ್ರಹದ ಮೂಲಕವೂ ಇಂಥ ಸಮರ್ಥನೆಗಳ ಪೊಳ್ಳುತನವನ್ನು ಹೊರಗೆಳೆಯಬೇಕಾಯಿತು. ಇತ್ತೀಚೆಗೆ ವಂಶವಾಹಿನಿಯಿಂದ ಪೂರ್ವನಿಯೋಜಿತವಾಗಿಯೇ ಹುಡುಗಿಯರಲ್ಲಿ Spacial ability ಕಡಿಮೆ ಇದ್ದು, ಹುಡುಗಿಯರು ವಿಜ್ಞಾನವನ್ನು ತೆಗೆದುಕೊಳ್ಳಲು ಸಮರ್ಥರಲ್ಲ, ಎಂಬ ವಾದಗಳು ಎದ್ದಿವೆ. ಇಂಥ ವರದಿ ಆರಂಭವಾದದ್ದು ಯಾವುದೇ ಪ್ರಾಯೋಗಿಕ ವೈಜ್ಞಾನಿಕ ಸತ್ಯದ ಆಧಾರದ ಮೇಲಲ್ಲ, ಕೇವಲ ಕೆಲವು ಹುಡುಗ ಹುಡುಗಿಯರನ್ನು ಆರಿಸಿಕೊಂಡು ಅವರಲ್ಲಿ Spacial ability ಪರೀಕ್ಷಿಸಿದಾಗ, ಅಂಕಿ-ಸಂಖ್ಯೆಯ ಪ್ರಕಾರ ಹುಡುಗಿಯರು ಸ್ವಲ್ಪ ಹಿಂದೆ ಬಿದ್ದರು. ಅಂಕಿ-ಸಂಖ್ಯೆಯ ಆಧಾರಿತ ನಿಯಮಗಳ ಮೇಲೆ ಸ್ತ್ರೀಯರು ವಿಜ್ಞಾನಕ್ಕೆ ಅನರ್ಹರು ಎಂಬುದು ಮೂರ್ಖತನವಾಗುತ್ತದೆ. ಮಹಿಳಾ ವಿಜ್ಞಾನಿಗಳ ಸಂಖ್ಯೆ ಕಡಿಮೆ ಇರಲು ಕಾರಣ, ಜೀವಶಾಸ್ತ್ರೀಯವಾದ ಕೊರತೆಗಳಲ್ಲ, ನಮ್ಮ ಸಮಾಜ ಹೆಣ್ಣಿನ ವಿದ್ಯಾಭ್ಯಾಸ, ಉದ್ಯೋಗ, ಮಹತ್ವಾಕಾಂಕ್ಷೆಗಳಿಗೆ ತೋರಿರುವ ಉಪೇಕ್ಷೆ ಇದಕ್ಕೆ ಕಾರಣ. ಗಂಡು-ಹೆಣ್ಣು ಮಗುವಿನ ಪೋಷಣೆಯಲ್ಲಿ ಹಿರಿಯರ ವಿಭಿನ್ನ

ಧೋರಣೆ, ಪರಿಸರದ ಪ್ರಭಾವ, ಸಮಾಜದ ಪೂರ್ವಾ ಗ್ರಹಪೀಡಿತ ವ್ಯವಸ್ಥೆ, ಹುಡುಗ-ಹುಡುಗಿಯರ ಭವಿಷ್ಯದ ಮಾನಸಿಕ ಅಂತರ, ಆಸಕ್ತಿಗಳ ವೈಪರೀತ್ಯಕ್ಕೆ ಕಾರಣ ವಾಗಿದೆ. ಬಾಲ್ಯದಿಂದಲೂ ಹುಡುಗಿಯರಿಗೆ ಮನೆಕೆಲಸ, ಕೈ ಕೆಲಸಗಳಿಗೆ ಒತ್ತುಕೊಟ್ಟು ಮದುವೆಯೇ ಬದುಕಿನ ಪರಮಗುರಿಯೆಂಬಂತೆ ತಯಾರಿಸುತ್ತಾರೆ. ಆಕೆಯ ಬೌದ್ಧಿಕ ಬೆಳವಣಿಗೆಗೆ ಹೆಚ್ಚು ಪ್ರಾಮುಖ್ಯವಿಲ್ಲ. ಆದರೆ ನಮ್ಮ ಸಮಾಜದಲ್ಲಿ ಗಂಡಿಗೆ ಓದು, ಡಿಗ್ರಿ, ಉದ್ಯೋಗ ಗಳು ಅತಿ ಅವಶ್ಯವಾದ ಕಾರಣ, ಆಸಕ್ತಿ ಇರದಿದ್ದರೂ ಹಣ ಕೊಟ್ಟಾದರೂ ವಿಜ್ಞಾನ – ತಂತ್ರಜ್ಞಾನಗಳತ್ತ ಅವನನ್ನು ತಳ್ಳುವ ಸಂಭವ ಹೆಚ್ಚಿದೆ.

ವಿಜ್ಞಾನ ರಂಗದಲ್ಲಿ ಸ್ತ್ರೀ ಸಾಮರ್ಥ್ಯದ ಬಗ್ಗೆ ಕಂಡುಬರುವ ಅನುಮಾನಗಳು ನಿರಾಧಾರವಾದುವು. ಪ್ರಾಚೆಕ- ಮೇರಿಕ್ಯೂರಿಯ ಉದಾಹರಣೆಯೇ ಸಾಕು. 'ಪಿಚ್ ಬ್ಲೆಂಡ್'ನ ರಿಲ್ ಯುರೇನಿಯಂ ಅದುರು. ಸಮಸ್ಯೆಯನ್ನು ಮೇರಿಗೇ ತಂದುಕೊಟ್ಟಿದ್ದರು. ಮೇರಿ ಮತ್ತು ಪಿಯರಿ ಕ್ಯೂರಿ ಹಗಲಿರುಳು 'ಪಿಚ್‌ಬ್ಲೆಂಡ'ನ್ನು ಕುದಿಸಿ, ತಿರುವಿ, ಸೋಸುತ್ತಾ ಸಂಶೋಧನೆ ನಡೆಸಿ, ಕಡೆಗೆ ರೇಡಿಯಂ ಕಂಡುಹಿಡಿದರು. ಇಬ್ಬರಿಗೂ ನೋಬೆಲ್ ಪಾರಿತೋಷಕ ದೊರೆಯಿತು. ಪಿಯರಿ ಸತ್ತಾಗ, ಅದೇ ಸ್ಥಾನಕ್ಕೆ ಮೇರಿಯನ್ನು ಆಯ್ಕೆ ಮಾಡಲು ಬಗೆಬಗೆಯ ಆಕ್ಷೇಪಗಳಿದ್ದವು. "ಕ್ಯೂರಿ ದಂಪತಿಗಳಲ್ಲಿ ನಿಜವಾದ ಮೇಧಾವಿ ಪಿಯರಿ, ಮೇರಿ ಕೇವಲ ಸಹಾಯಕಳು. ಒಂದು ಹೆಣ್ಣಿಗೆ ಭೌತಶಾಸ್ತ್ರದ ಮುಖ್ಯಸ್ಥ ಸ್ಥಾನ ಕೊಡುವುದುಂಟೆ" ಎಂಬೆಲ್ಲ ವಾದ ಗಳಿದ್ದವು. ಮತ್ತೆ ಕೆಲವೇ ವರ್ಷಗಳಲ್ಲಿ ಮೇರಿಕ್ಯೂರಿ ಏಕಾಂಗಿಯಾಗಿ ರೇಡಿಯಂನ ಶುದ್ಧೀಕೃತ ರೂಪದಲ್ಲಿ ಬೇರ್ಪಡಿಸಿ ಎರಡನೇ ನೋಬೆಲ್ ಪಾರಿತೋಷಕ ಪಡೆ ದದ್ದು ಹೆಣ್ಣಿನ ಸಾಮರ್ಥ್ಯ, ಬುದ್ಧಿವಂತಿಕೆಯ ಬಗೆ ಸಂಶಯ ವ್ಯಕ್ತಪಡಿಸುವವರಿಗೆ ಸವಾಲಾಗಿದೆ.

ನಮ್ಮಲ್ಲಿ ವಿಜ್ಞಾನದ ಪಠ್ಯಕ್ರಮ ಬದುಕಿಗೆ ಬಹು ದೂರವಾಗಿ, ವಾಸ್ತವಕ್ಕೆ ಸಂಬಂಧವೇ ಇಲ್ಲದಂತೆ. ಬರೀ ಸಮೀಕರಣಗಳ ಗೊಂದಲದಂತಿದೆ. ಜೊತೆಗೇ ಪೋಷಕರ, ಪ್ರಾಧ್ಯಾಪಕರ ಧೋರಣೆಗಳು ಬಹಳಷ್ಟು ಬಾಲೆಯರು ವಿಜ್ಞಾನದಲ್ಲಿ ಅನಾಸಕ್ತರಾಗುವಂತೆ ಮಾಡುತ್ತದೆ. ಹಾಗೊಮ್ಮೆ ವಿಜ್ಞಾನ ರಂಗಕ್ಕೆ ಹೊಕ್ಕರೂ, ಆಕೆಯ ಸಾಮರ್ಥ್ಯದ ಬಗ್ಗೆ ಅನುಮಾನ ಗಳಿದ್ದೇ ಇರುತ್ತವೆ. "ಮದುವೆ ಆದರೆ ಏನು ಮಾಡ್ತೀರಾ? ಮಕ್ಕಳಾದರೆ ಕೆಲಸ ಬಿಡುತ್ತೀರಾ" ಎಂಬಂಥ ವ್ಯಯಕ್ತಿಕ ಪ್ರಶ್ನೆಗಳು ಬಹಳಷ್ಟು ಸಂದರ್ಶನ ಗಳಲ್ಲಿ ಎದುರುಗೊಳ್ಳಬೇಕಾಗುತ್ತದೆ. ತಾಯ್ತನದ ಜವಾಬ್ದಾರಿಯಿಂದ ಆಕೆ ಕಾರ್ಯರಂಗದಿಂದ ಒಂದೆರಡು ವರ್ಷ ಹೊರಗುಳಿದರೂ ಪುನರ್ ಪ್ರವೇಶ ಅಸಾಧ್ಯವಾಗು ತ್ತದೆ. ದಿನದಿನಕ್ಕೂ ಅಭಿವೃದ್ಧಿ, ಬದಲಾವಣೆ ಕಾಣುವ ವಿಜ್ಞಾನ ರಂಗದಲ್ಲಿ 2–3 ವರ್ಷಗಳ ಅಂತರವು ಗಮ ನಾರ್ಹವಾಗುತ್ತದೆ. ಹೀಗಾಗಿ ಬಹಳಷ್ಟು ಮಹಿಳೆಯರ ವಿದ್ಯಾಭ್ಯಾಸ, ಉದ್ಯೋಗಾಕಾಂಕ್ಷೆ ವ್ಯರ್ಥವಾಗುವು ದುಂಟು. ವಿದೇಶಗಳಲ್ಲಿ ಹೀಗೆ ಕಾರಣಾಂತರವಾಗಿ ವೃತ್ತಿರಂಗದಿಂದ ಕೆಲಕಾಲ ದೂರ ಉಳಿದ ಮಹಿಳಾ ವಿಜ್ಞಾನಿಗಳಿಗೆ ಆಯಾ ಕಾರ್ಯರಂಗದ ಹೊಸ ಪ್ರಗತಿಗಳ ತಿಳಿಸುವಲ್ಲಿ, ಆಯಾ ವಿಷಯಗಳ ಆಳ ಅಧ್ಯಯನಕ್ಕೆ ಸಹಾಯಕವಾಗುವಲ್ಲಿ 'open university' ಗಳು ಪ್ರಯತ್ನಿಸುತ್ತಿವೆ. ಇಂಥ ಪ್ರಯತ್ನ ಭಾರತದಲ್ಲೂ ಬೇಕಿದೆ.

ಇಂಥ ಹಲವು ಬಗೆಯ ಮಹಿಳಾ ವಿಜ್ಞಾನಿಗಳ ಸಮಸ್ಯೆಯ ಅಧ್ಯಯನಕ್ಕೆ ಅಮೆರಿಕದಲ್ಲಿ SWE ನಂಥ (Society for Women Engineers) ಸಂಸ್ಥೆಗಳು, ಬ್ರಿಟನ್ನಿನ GIST (Girls into Seience and Technology) ಯೋಜನೆಗಳು ಪ್ರಯತ್ನಿಸುತ್ತಿವೆ. ಈ ಸಂಸ್ಥೆಗಳು ಎಳೆಯ ಬಾಲೆಯ ರಲ್ಲಿ ವಿಜ್ಞಾನದ ಬಗ್ಗೆ ಆಸಕ್ತಿ ಮೂಡಲು, ವಿಜ್ಞಾನ ಜಗತ್ತಿನ ಅದ್ಭುತಗಳ, ಮಹಿಳಾ ವಿಜ್ಞಾನಿಗಳ ಜೀವನ ಚರಿತ್ರೆಗಳ, ಸರಳವಾಗಿ ರಸವತ್ತಾಗಿ ಬರೆದು ಮಕ್ಕಳ ಪುಸ್ತಕಗಳಾಗಿ ಹೊರತರುತ್ತಿವೆ. ಪೋಷಕರಿಗೆ, ಪ್ರಾಧ್ಯಾಪಕರಿಗೆ, ಸ್ತ್ರೀ ಸಾಮರ್ಥ್ಯ, ಮಹಿಳಾ ವಿಜ್ಞಾ ನಿಗಳ ಸಾಧನೆಗಳ ಬಗ್ಗೆ ತಿಳಿಸಿ ಅವರನ್ನೊಳಗೊಂಡು, ಒಟ್ಟು ಸಮಾಜದ ಪೂರ್ವಾಗ್ರಹಪೀಡಿತ ಮನೋಭಾವ ವನ್ನು ಬದಲಿಸಲು ಯೋಜನೆಗಳ ಹಾಕಿಕೊಂಡಿದೆ. ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿಯ ಕೊರತೆಗಳ ಅಭ್ಯ ಸಿಸಿ ಪರಿಹಾರಗಳ ಸೂಚಿಸುತ್ತಿವೆ.

ವಿಜ್ಞಾನ ಜಗತ್ತಿನ ಅದ್ಭುತಗಳು, ರೋಚಕ ಅನುಭವಗಳು, ಸಾಧನೆಯ ಶಿಖರಗಳು ಸ್ತ್ರೀ-ಪುರುಷರಿಗೆ ಸಮಾನವಾಗಿ ತೆರೆದಿವೆ. ●

ಪಿಯರಿ ಕ್ಯೂರಿ "ಮೇಧಾವಿ ಮಹಿಳೆಯರು ಅತಿ ವಿರಳ. ಸಾಮಾನ್ಯ ಹೆಣ್ಣು ಗಂಭೀರ ಶೋಧನೆಯ ವಿಜ್ಞಾನಿಗೆ ದೊಡ್ಡ ತೊಡಕು" ಎಂದು ಬರೆದಿದ್ದ. ಈಗ ಪಿಯರಿಗೆ ಮೂವತ್ತೈದರ ವಯಸ್ಸು. ಬದುಕಿನ ಸಂಬಂಧ ಸಾಮೀಪ್ಯಗಳು ಅವನ ಅನಿಸಿಕೆಗೆ ಪುಷ್ಟಿಯನ್ನೇ ಕೊಟ್ಟಿದ್ದವು. ಆತ ವಿದ್ಯುತ್ ಮತ್ತು ಅಯಸ್ಕಾಂತದ ಕುರಿತಾಗಿ ಸಂಶೋಧನೆ ನಡೆಸುತ್ತಿದ್ದ. ತನ್ನ ಸೋದರನೊಡನೆ ಪ್ರೊ|| ಪಾಲ್‌ನ ಪ್ರಯೋಗಾಲಯದಲ್ಲಿ ಕೆಲಸ ಮಾಡುತ್ತಿದ್ದ. ಹದಿನೆಂಟರ ವಯಸ್ಸಿಗೇ ಪಿಯರಿ ಭೌತಶಾಸ್ತ್ರದ ಸ್ನಾತಕೋತ್ತರ ಪದವಿ ಗಳಿಸಿದ್ದ. ಆತನಾಗಲೇ 'ಪೀಡನ ವಿದ್ಯುತ್' ಸಿದ್ಧಾಂತವನ್ನು ಕಂಡು ಹಿಡಿದು ವಿಜ್ಞಾನಿಗಳಲ್ಲಿ ಪ್ರಮುಖನಾಗಿದ್ದ. 'ಪೀಡನ ವಿದ್ಯುತ್' ಗುಣವುಳ್ಳ ಹರಳುಗಳು, ಅಮುಕಿದರೆ (ಒತ್ತಡ ಹಾಕಿದರೆ) ವಿದ್ಯುತ್ ತಯಾರಿಸುವಂಥವು.

ಪಿಯರಿ ಮತ್ತು ಮೇರಿ ಪೋಲಿಷ್ ಭೌತಶಾಸ್ತ್ರಜ್ಞ ಪ್ರೊ|| ಕೋವಲ್‌ಸ್ಕಿಯ ಮನೆಯಲ್ಲಿ ಮೊಟ್ಟ ಮೊದಲಿಗೆ ಭೇಟಿಯಾದರು. ಅಂದಿನ ಮಾತೆಲ್ಲ ಭೌತಶಾಸ್ತ್ರಕ್ಕೇ ಸಂಬಂಧಪಟ್ಟದ್ದಾದತ್ತು. ಪಿಯರಿ, ಮೇರಿಯನ್ನು ಮತ್ತೊಮ್ಮೆ ಭೇಟಿಯಾಗಲು ಬಯಸಿದ. ಆಕೆಯ ಬುದ್ಧಿವಂತಿಕೆ ಪಿಯರಿಯನ್ನು ಸೆಳೆದಿತ್ತು. ಮೇರಿ, ಪಿಯರಿಯೊಡನೆ ಪ್ರಯೋಗಾಲಯದಲ್ಲಿ ಕೆಲಸಮಾಡಲು ಪ್ರಾರಂಭಿಸಿದಳು. ಮೇಧಾವಿ ವಿಜ್ಞಾನಿಗಳಿಬ್ಬರೂ ತಮ್ಮ ಸಂಶೋಧನೆಯೊಡನೆ ಬದುಕನ್ನು ಹಂಚಿಕೊಳ್ಳಲು ಆಶಿಸಿದರು. ಮರು ವರ್ಷ ಮೇರಿ, ಪಿಯರಿಯ ಪತ್ನಿಯಾದಳು. 'ಮೇಧಾವಿ ಮಹಿಳೆಯರು ವಿರಳ' ಎಂದಿದ್ದ ಪಿಯರಿಗೆ ಅಂಥ ಪ್ರಖರ ಬುದ್ಧಿವಂತಿಕೆಯ ಸಾಂಗತ್ಯ ದೊರೆಯಿತು. ಮೇರಿ, ಪಿಯರಿಯೊಡನೆ ವಿದ್ಯುತ್ ಮತ್ತು ಅಯಸ್ಕಾಂತದ ಕುರಿತಾಗಿ ಸಂಶೋಧನೆ ಪ್ರಾರಂಭಿಸಿದಳು.

ಜರ್ಮನಿಯಲ್ಲಿ ವಿಜ್ಞಾನಿ ರಾಂಟ್‌ಜನ್ ಅತಿ ಆಳಕ್ಕೆ ಭೇದಿಸುವ ಕಿರಣಗಳನ್ನು ಕಂಡು ಹಿಡಿದಿದ್ದ. 1896ರ ಜನವರಿಯಲ್ಲಿ ಈ ರಾಂಟ್‌ಜನ್ ಕಿರಣಗಳನ್ನು ವಿಜ್ಞಾನ ಜಗತ್ತಿಗೆ ಕ್ಷ-ಕಿರಣಗಳಾಗಿ ಪರಿಚಯಿಸಿದ. ಕ್ಷ-ಕಿರಣಗಳು ಘನವಸ್ತುಗಳನ್ನು ಹೊಕ್ಕು ಹಾಯಬಲ್ಲ ಕಿರಣಗಳು.

ಫ್ರಾನ್ಸ್‌ನಲ್ಲಿ ಪ್ರೊ|| ಹೆನ್ರಿ ಬೆಕರೆಲ್ ಫಾಸ್-ಫೆರೆಸೆನ್ಸ್ ಸಮಸ್ಯೆಯ ಬಗ್ಗೆ ಕೆಲಸ ಮಾಡುತ್ತಿದ್ದರು. ಕೆಲವು ವಸ್ತುಗಳು ಸೂರ್ಯನ ಕಿರಣಗಳಿಗೆ ಸ್ವಲ್ಪ ತೆರದಿಟ್ಟರೆ, ರಾತ್ರಿಯಲ್ಲೂ ಬೆಳಕು ಚಿಮ್ಮುತ್ತಿದ್ದವು. ಈ ಕುರಿತಾದ ಸಂಶೋಧನೆ ಪ್ರೊ|| ಹೆನ್ರಿಯವರದು. ಆತನ ಪ್ರಯೋಗಗಳು ಯುರೇನಿಯಮ್‌ನ ಅದುರಾದ 'ಪಿಚ್‌ಬ್ಲೆಂಡ್' ನಲ್ಲಿ ಯುರೇನಿಯಮ್‌ನ ಹೊರತಾಗಿ ಮತ್ತೊಂದು ಮೂಲಧಾತುವೂ ಜೊತೆಗೂಡಿದೆಯೆಂಬ ನಂಬುಗೆಗೆ ಒತ್ತು ಕೊಟ್ಟಿತ್ತು. ಪ್ರೊ|| ಹೆನ್ರಿ, ಮೇರಿಯ ಪ್ರಯೋಗಗಳ ಬಹಳಷ್ಟು ಮೆಚ್ಚಿ, ಪ್ರಭಾವಿತರಾಗಿದ್ದರು. ಪಿಚ್‌ಬ್ಲೆಂಡ್‌ನ ಸಮಸ್ಯೆಯನ್ನು ಮೇರಿಗೆ ತಂದೊಪ್ಪಿಸಿದರು. ಮೇರಿ ಮತ್ತು ಪಿಯರಿ ವಿಷಯದ ಬಗ್ಗೆ ಸಾಕಷ್ಟು ಚರ್ಚಿಸಿದರು. ಅವರು ಹುಡುಕುತ್ತಿದ್ದ ವಸ್ತು, ತಿಳಿದಿರುವ ಮೂಲಧಾತುವಿನಲ್ಲಿ ಒಂದಾಗಿರಲಿಲ್ಲ. ಅವರ ಯೋಚನಾ ಸರಣಿಯ ಪ್ರಕಾರ ಅದು ಹೊಸತಾಗಿರಲೇ ಬೇಕಿತ್ತು. ಮೇರಿ ಮತ್ತು ಪಿಯರಿ ಮತ್ತೆಲ್ಲ ಕೆಲಸಗಳ ತೊರೆದು, ಹೊಸ ಮೂಲಧಾತುವಿನ ಶೋಧನೆಗೆ ನಿಂತರು.

ಆಸ್ಟ್ರಿಯದಲ್ಲಿ ಮಾತ್ರ ದೊರೆವ ಪಿಚ್‌ಬ್ಲೆಂಡ್ ಬಹಳ ಬೆಲೆಯ ಅದುರು. ಹಣದ ಖರ್ಚಿಲ್ಲದೆ ಅದನ್ನು ಪಡೆಯುವುದು ಸುಲಭವಿರಲಿಲ್ಲ. ಈ ಅದುರಿನಲ್ಲಿ ಹುಡುಕುತ್ತಿರುವ ಹೊಸಧಾತುವಿದ್ದರೆ ಅದು ಯುರೇನಿಯಮನ್ನು ಬೇರ್ಪಡಿಸುವ ನಂತರವೂ ಉಳಿದ ಅದುರಿನಲ್ಲಿ ಇರಲೇಬೇಕು ಎಂದು ತರ್ಕಿಸಿದರು. ಆಸ್ಟ್ರಿಯಾ ಸರಕಾರ, ಯುರೇನಿಯಮ್ ತೆಗೆದುಳಿದ ಪಿಚ್‌ಬ್ಲೆಂಡನ್ನು ಕೇವಲ ಸಾರಿಗೆ ಖರ್ಚಿಗೆ ಒದಗಿಸಲು ಒಪ್ಪಿತ್ತು. ಟನ್‌ಗಟ್ಟಲೆ ಕೊಳಕಾದ ಪಿಚ್‌ಬ್ಲೆಂಡ್‌ನ್ನು ಅವರ ಸೋರುಸೂರಿನ ಮರದ ಷೆಡ್ಡಿಗೆ ರವಾನಿಸಲಾಯಿತು. ಅದು ಅವರ ಪ್ರಯೋಗಾಲಯವಾಗಲಿತ್ತು. ಅಲ್ಲಿಂದ ಮುಂದೆ ವಿಜ್ಞಾನದ ಚರಿತ್ರೆಯಲ್ಲೇ ಕಡು ಕಷ್ಟದ ಶೋಧನೆ ಪ್ರಾರಂಭವಾಯಿತು. ಮೇರಿ ಮತ್ತು ಪಿಯರಿ ಅದುರಿನ ಶುದ್ಧೀಕರಣಕ್ಕೆ ನಿಂತರು. ದೊಡ್ಡ ಬಾಣಲೆಗಳಲ್ಲಿ ಕಬ್ಬಿಣದ ಒಲೆಯ ಮೇಲೆ ಕುದಿಸಿದರು. ಹದಗೊಂಡ

ವ್ಯಕ್ತಿ ವಿಶೇಷ...

ಮೇರಿ ಕ್ಯೂರಿ

★ ಚಂದ್ರ

1867ರ ನವೆಂಬರ್ ಏಳರಂದು, ಮೇರಿ ಕ್ಯೂರಿ ಪೋಲೆಂಡಿನಲ್ಲಿ ಜನಿಸಿದಳು. ರೈತವರ್ಗಕ್ಕೆ ಸೇರಿದ್ದ ತಂದೆ-ತಾಯಿಯರು, ವ್ಯವಸಾಯ ಬದಿಗಿಟ್ಟು ವಿದ್ಯೆಯ ಬೆನ್ನು ಹತ್ತಿ ಪಟ್ಟಣ ಸೇರಿದ್ದರು. ತಂದೆ ಹೈಸ್ಕೂಲಿನಲ್ಲಿ ಪ್ರಾಧ್ಯಾಪಕ. ತಾಯಿ, ನುರಿತ ಪಿಟೀಲು ವಾದಕಿ. ಮೇರಿ ಹತ್ತು ವರ್ಷವಿರುವಾಗಲೇ ತಾಯಿ ಕ್ಷಯಕ್ಕೆ ತುತ್ತಾಗಿ ತೀರಿಕೊಂಡಳು.

1883ರಲ್ಲಿ ಮೇರಿ ಚಿನ್ನದ ಪದಕ ಪಡೆದು ಹೈಸ್ಕೂಲ್ ವಿದ್ಯಾಭ್ಯಾಸ ಮುಗಿಸಿದಳು. ಮನೆಯ ಆರ್ಥಿಕ ಸ್ಥಿತಿ ಆಶಾದಾಯಕವಾಗಿರಲಿಲ್ಲ. ಭವಿಷ್ಯದ ಬಗ್ಗೆ ಬಹಳಷ್ಟು ಯೋಚಿಸಿದ್ದಾಯಿತು. ಪ್ಯಾರೀಸಿಗೆ ಹೋಗಿ ಓದುವ ಆಸೆ, ಆದರೆ ಹಣದ ಮುಗ್ಗಟ್ಟು ತಡೆ ಹಿಡಿಯಿತು. ಅಕ್ಕ ಬ್ರೊನ್ಯಾಳೊಡನೆ ಸಮಾಲೋಚಿಸಿ ಒಂದು ಯೋಜನೆ ತಯಾರಾಯಿತು: ಮೊದಲು ಮೇರಿ ಒಂದು ಕೆಲಸ ಹಿಡಿದು ಬ್ರೊನ್ಯಾಳನ್ನು ಕಾಲೇಜು ಓದಿಸುವುದು. ನಂತರ ಬ್ರೊನ್ಯಾ ಮೇರಿಯ ಓದಿಗೆ ಸಹಾಯಕಳಾಗುವುದು. ಯೋಜನೆ ತಕ್ಷಣವೇ ಕಾರ್ಯರೂಪಕ್ಕಿಳಿಯಿತು. ಮೇರಿ ಶ್ರೀಮಂತರ ಮನೆಯೊಂದರಲ್ಲಿ ಮಕ್ಕಳಿಗೆ ಪಾಠ ಹೇಳಿಕೊಡುವ ಉಪಾಧ್ಯಾಯಿನಿಯಾಗಿ ಸೇರಿಕೊಂಡಳು. ಮನೆಯ ಹಿರಿಯ ಮಗ, ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದ. ರಜೆಗೆ ಮನೆಗೆ ಬಂದವನು ಮೇರಿಯ ರೂಪ ಲಾವಣ್ಯ, ಬುದ್ಧಿವಂತಿಕೆಗೆ ಮಾರು ಹೋದ. ಏಕಾಂಗಿಯಾಗಿದ್ದ ಮೇರಿಯ ಎದೆಯಲ್ಲೂ ಪ್ರಥಮ ಪ್ರೇಮದ ಪುಳಕ! ಇನ್ನೇನು ವಿವಾಹವು ಆಗಬಹುದಿತ್ತು. ಆದರೆ ಹುಡುಗನ ದರ್ಪದ ತಾಯಿ, ಮನೆ ಪಾಠ ಹೇಳಿಕೊಡುವ ಮಾಮೂಲಿ ಉಪಾಧ್ಯಾಯಿನಿಯೊಡನೆ ಮಗನ ಮದುವೆಗೆ ಸರ್ವಥಾ ಒಪ್ಪಲಿಲ್ಲ. ಹದಿನೇಳರ ಮೇರಿಯ ಹೃದಯ ಚೂರಾಗಿತ್ತು. ಜಗತ್ತೇ ಬೇಡವೆನಿಸಿತ್ತು. ಹಲವು ಬಾರಿ ಅದೃಷ್ಟ ವಿಷಾದದ ಮುಖವಾಡ ತೊಟ್ಟು ಬರುತ್ತದೆ. ಮೇರಿಯ ಭವಿಷ್ಯ ಪಿಯರಿ ಕ್ಯೂರಿಯೊಡನೆ ಅರ್ಥಪೂರ್ಣ ಸಾಂಗತ್ಯಕ್ಕಾಗಿ ಕಾದಿತ್ತು.

ಮೇರಿ ಪಾಠ ಹೇಳುತ್ತಾ, ಅಕ್ಕನನ್ನು ಓದಿಸಿದಳು. ಅಕ್ಕ ಬ್ರೊನ್ಯಾ ವೈದ್ಯಕೀಯ ಪದವೀಧರಳಾಗಿ, ಜೊತೆಯ ಸಹಪಾಠಿಯೊಡನೆ ಆಕೆಯ ವಿವಾಹವು ಜರುಗಿತು. ಈಗ ಮೇರಿಗೆ ಇಪ್ಪತ್ತಮೂರನೇ ವಯಸ್ಸು. ಅವಳ ಬಹು ದಿನದ ಕನಸು ನನಸಾಗುವ ಸುವರ್ಣ ಕಾಲ. ವಿಜ್ಞಾನವನ್ನು ತೆಗೆದುಕೊಂಡು ಅಭ್ಯಾಸಕ್ಕಿಳಿದಳು. ಹಣದ ಮುಗ್ಗಟ್ಟು ಈಗಲೂ ಇತ್ತು. ಕೊರೆವ ಮೇಲಟ್ಟದ ಕೋಣೆಯಲ್ಲಿ ವಾಸ. ಊಟದ ಖರ್ಚಿಗಿದ್ದ ಅಲ್ಪ ಹಣದಲ್ಲಿ ಬ್ರೆಡ್ಡು, ಬೆಣ್ಣೆ, ಟೀ ಹೊರತು ಮತ್ತೇನೂ ಕೊಂಡು ಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಒಮ್ಮೊಮ್ಮೆಯಂತೂ ಇಡೀ ದಿನ ಮೂಲಂಗಿ, ಚೆರ್ರಿ ಹಣ್ಣುಗಳ ತಿಂದುಕೊಂಡಿದ್ದಳು. ಮಾಂಸ, ಮೊಟ್ಟೆ ಅಪರೂಪಕ್ಕೆ ಕಾಣಿಸಿಕೊಳ್ಳಬೇಕಷ್ಟೆ.

ಇಂಥ ಪ್ರತಿಕೂಲ ಪರಿಸ್ಥಿತಿಯಲ್ಲೂ ಮೇರಿ ಗೆದ್ದು ಬಂದಳು. ಗಣಿತ, ಕಾವ್ಯ, ರಸಾಯನ ಶಾಸ್ತ್ರ, ಸಂಗೀತ, ಭೌತಶಾಸ್ತ್ರ, ಖಗೋಳ ಶಾಸ್ತ್ರಗಳ ಅಭ್ಯಯಿಸಿದಳು. ನಡು ನಡುವೆ ಪ್ರಯೋಗಾಲಯದಲ್ಲಿ ಬಾಟಲಿಗಳ ತೊಳೆದು ಹಣ ಸೇರಿಸುತ್ತಿದ್ದಳು. ಸ್ನಾತಕೋತ್ತರ ಪರೀಕ್ಷೆಯಲ್ಲಿ ಭೌತಶಾಸ್ತ್ರದಲ್ಲಿ ಮೊಟ್ಟ ಮೊದಲ ರ್‍ಯಾಂಕ್ ಗಳಿಸಿ, ಮರು ವರ್ಷ ಗಣಿತದಲ್ಲಿ ಎರಡನೇ ಸ್ಥಾನ ಪಡೆದಳು. ಮೇರಿಗೀಗ ಇಪ್ಪತ್ತೇಳರ ವಯಸ್ಸು. ಮೊದಲ ಪ್ರೇಮದ ಭಗ್ನತೆ ಚಿರನೋವಾಗಿ ಎದೆಯಲ್ಲಿ ಉಳಿದಿತ್ತು. ಬಹಳಷ್ಟು ಒಬ್ಬಂಟಿಗಳಾಗಿ ಉಳಿಯಬಯಸುತ್ತಿದ್ದಳು.

ಮಾಣುಗಳಾಗುತ್ತದೆ. ರೇಡಿಯಂ ವಿಜ್ಞಾನದ ಅಚ್ಚರಿಯ ಶೋಧ.

ಕ್ಯೂರಿ ದಂಪತಿಗಳಿಗೆ ಜಗತ್ತಿನಾದ್ಯಂತ ರೇಡಿಯಂ ತಯಾರಿಕೆಗಾಗಿ ಬೇಡಿಕೆಗಳು ಬಂದವು. ಕ್ಯೂರಿ ದಂಪತಿಗಳು ನಿಜವಾದ ವಿಜ್ಞಾನಿಗಳಂತೆ ತಮ್ಮ ವೈಜ್ಞಾನಿಕ ಶೋಧನೆಯಮಾರಲು ಒಪ್ಪಲಿಲ್ಲ. ಇದೇ ಶೋಧನೆಗೆ ಅವರಿಗೆ ನೋಬಲ್ ಪಾರಿತೋಷಕ ದೊರಕಿತು. ಪಾರಿತೋಷಕದ ಹಣವನ್ನು ಪಿಚ್‌ಬ್ಲೆಂಡ್ ಶುದ್ಧೀಕರಣದ ವರ್ಷಗಳಲ್ಲಿ ಮಾಡಿಕೊಂಡ ಸಾಲ ತೀರಿಸಲು ಉಪಯೋಗಿಸಿದರು.

ಪಿಯರಿಯನ್ನು ಸಾರ್‌ಬೊನೆನಲ್ಲಿ ಪ್ರೊಫೆಸರ್ ಹುದ್ದೆಗೆ ಆರಿಸಲಾಯಿತು ಹಾಗೂ ಸುಸಜ್ಜಿತ ಪ್ರಯೋಗಾಲಯವನ್ನು ನೀಡಲಾಯಿತು. 1904 ರಲ್ಲಿ ಎರಡನೇ ಮಗಳು ಹುಟ್ಟಿದಳು. ಬದುಕು ಅಚ್ಚುಕಟ್ಟಾಗಿ ವ್ಯವಸ್ಥಿತವಾದಾಗ, ಎಲ್ಲವೂ ಆಶಾದಾಯಕ ಭವಿಷ್ಯದತ್ತ ತಿರುಗಿದ ಹೊತ್ತಿನಲ್ಲಿ ಬರಸಿಡಿಲಿನಂತೆ ಬಂದೆರಗಿದ ಅಪಘಾತ ಪಿಯರಿಯನ್ನು ಅಗಲಿಸಿತು. ಮನೆಗೆ ಹಿಂತಿರುಗುತ್ತಿದ್ದ ಪಿಯರಿಯನ್ನು ಭಾರದ ಕುದುರೆಗಾಡಿಯೊಂದು ಅಪ್ಪಳಿಸಿ ನೆಲಕ್ಕುರುಳಿಸಿ ಮೇಲೆ ಹಾಯ್ದು ಹೋಯಿತು. ಸ್ಥಳದಲ್ಲೇ ಪಿಯರಿ ಮೃತನಾದ.

ಸಂಪೂರ್ಣ ಭಗ್ನಳಾದ ಮೇರಿ ಮತ್ತೆ ತನ್ನ ವೈಜ್ಞಾನಿಕ ಪ್ರಯೋಗಗಳತ್ತ ಮನಹರಿಸಿ ಸಮಾಧಾನ ಹುಡುಕಿದಳು. ರಾತ್ರಿಯ ಏಕಾಂತದಲ್ಲಿ ಸತ್ತ ಗಂಡನಿಗೆ ತನ್ನ ಕೆಲಸದ ಬಗ್ಗೆ ವಿವರಿಸುತ್ತಾ ಪತ್ರ ಬರೆವಳು. ಮೇರಿಗೆ ಪಿಯರಿ ಬಿಟ್ಟು ಹೋದ ಭೌತಶಾಸ್ತ್ರದ ಮುಖ್ಯಸ್ಥ ಸ್ಥಾನವನ್ನು ನೀಡಲಾಯಿತು. ಈ ಕುರ್ಚಿಯಲ್ಲಿ ಕುಳಿತ ಮೊಟ್ಟ ಮೊದಲ ಮಹಿಳೆ ಮೇರಿ ಕ್ಯೂರಿ ಹೆಣ್ಣೊಬ್ಬಳು ಇಂಥ ಸ್ಥಾನ ಅಲಂಕರಿಸುವುದು ಅಂದಿಗೆ ಅಸಂಭವವಾಗಿ ಕಂಡವು. ಬಹಳಷ್ಟು ಜನ ಹುಬ್ಬೇರಿಸಿದರು, ಪಿಯರಿ ಮಹಾಮೇಧಾವಿ, ಮೇರಿ ಎಲ್ಲೋ ಕೊಂಚ ಸಹಾಯಕಳಾಗಿದ್ದಳು ಎಂಬೆಲ್ಲ ಬುನಾದಿಯೇ ಇಲ್ಲದ ಗಾಳಿಮಾತುಗಳು ಎದ್ದವು. ಅವರೆಲ್ಲರ ಗಾಳಿವಾದಗಳ ತಲೆಕೆಳಗಾಗುವಂತೆ ಕೆಲಸ ಮಾಡಿದ ಮೇರಿ ತಾನೂ ಪಿಯರಿಯಷ್ಟೇ ಮೇಧಾವಿ ವಿಜ್ಞಾನಿಯೆಂದು ತೋರಿಸಿಕೊಟ್ಟಳು. 1910 ರಲ್ಲಿ ರೇಡಿಯಂನ್ನು ಶುದ್ಧೀಕೃತ ರೂಪದಲ್ಲಿ ಬೇರ್ಪಡಿಸುವಲ್ಲಿ ಯಶಸ್ವಿಯಾದಳು. ಕುದಿವ ರೇಡಿಯಂ ಕ್ಲೋರೈಡ್ ದ್ರವ್ಯದಲ್ಲಿ ವಿದ್ಯುತ್ ಪ್ರವಹಿಸಲಾಯಿತು. ಮರ್ಕ್ಯುರಿ ವಿದ್ಯುದ್ಧ್ರುವದ ಬಳಿ ಲೇಪ ಸಂಗ್ರಹವಾಯಿತು. ಈ ಮರ್ಕ್ಯುರಿಯನ್ನು ಕುದಿಸಿದಾಗ ರೇಡಿಯಂ ಸ್ವತಂತ್ರ ಮೂಲಧಾತುವಾಗಿ ಉಳಿಯಿತು, ಮೇರಿ ಕ್ಯೂರಿಯ ಈ ಸಂಶೋಧನೆಗೆ ಮತ್ತೊಮ್ಮೆ ನೋಬಲ್ ಪಾರಿತೋಷಕ ದೊರೆಯಿತು.

ಮೇರಿ ಕ್ಯೂರಿಯ ಬದುಕು ರೇಡಿಯಂನ ನಿಕಟ ಸಂಪರ್ಕದಲ್ಲಿ ಅರಳಿತು, ತಾನೇ ಜನ್ಮವಿತ್ತ ರೇಡಿಯಂನ ವಿಕಿರಣಕ್ಕೇ ಬಲಿಯಾಯಿತು. ಈ ಅತ್ಯಂತ ಮೇಧಾವಿ ಕಟು ಪರಿಶ್ರಮಿ ವಿಜ್ಞಾನಿ 1934ರಲ್ಲಿ ಕ್ಯಾನ್ಸರ್‌ಗೆ ತುತ್ತಾಗಿ ಮಡಿದಳು. ಆಕೆಯ ದೇಹದ ಬಹುಭಾಗಗಳು ವಿಕಿರಣಕ್ಕೆ ತೆರೆದಿಟ್ಟ ಕಾರಣ, ನಾಶವಾಗಿದ್ದವು. ಆಕೆಯ ನೋಟು ಪುಸ್ತಕಗಳು ಇಂದಿಗೂ ವಿಕಿರಣಗಳ ಚಿಮ್ಮುತ್ತ ಅಪಾಯಕಾರಿಯಾಗಿವೆ ●

(10ನೇ ಪುಟದಿಂದಮುಂದುವರೆದದು)

ಕವಿವರ್ಯರು ಚಿತ್ರಿಸಿದ ಚಿತ್ರಾಂಗದೆ ....

ನನ್ನನ್ನು ನಿನ್ನ ಸಹಭಾಗಿಯನ್ನಾಗಿ ಮಾಡುವುದಾದರೆ, ನೀನು ನನ್ನ ನಿಜ ಪರಿಚಯವನ್ನು ಪಡೆಯುವೆ" ಎನ್ನುತ್ತಾಳೆ. ಕುವೆಂಪುರವರ ಅರ್ಜುನ ಚಿತ್ರಾಂಗದೆಯನ್ನು ಅಗಲಿ ಹೋಗುವಾಗ, ಅವಳಿನ್ನು ನಿದ್ರಿಸುತ್ತಿರುವಾಗಲೇ ಅವಳಿಗೆ ತಿಳಿಸದೆ ಹೊರಟು ಬಿಡುತ್ತಾನೆ. ಆಗ ಮದನನಿತ್ತ ಸೌಂದರ್ಯ ಕಳೆದುಕೊಂಡಿದ್ದ ಚಿತ್ರಾಂಗದೆ ಅವನಿಗೆ 'ಪೂವಾಗಿ ಪೂಗಿ ಮಿಡಿಗಾಯ್ಗಳಂ ಪಡೆದೊಡಲ ವಾಸಂತದಂತ್ಯದ ರಸಾಲದೋಲ್' ಕಾಣಿಸುತ್ತಾಳೆ. ಅದೇ ಠಾಕೂರರ ಚಿತ್ರೆಯನ್ನು ಅಗಲುವಾಗ "ಪ್ರಿಯೆ ಇಂದು ನಾನು ಧನ್ಯ" ಎಂದು ನುಡಿಯುವ ಅರ್ಜುನನ ಮಾತು ಚಿತ್ರಾಂಗದೆಯ ಬಗೆಗಿನ ವಿಶ್ಲೇಷಣೆಯೂ ಆಗುತ್ತದೆ. 'ಸ್ತ್ರೀ ಸಹಜ' ಕೀಳರಿಮೆಯ ಸೋಂಕಿಲ್ಲದೆ, ಸುಖದುಃಖ ಸಮಭಾಗಕ್ಕೆ ಹಾತೊರೆಯುತ್ತಾ ಸಮಾನ ಮಾನವ ಜೀವಿಯೊಂದಾಗಿ ಚಿತ್ರಿತವಾಗಿರುವ ಠಾಕೂರರ ಚಿತ್ರೆ ಹೆಚ್ಚು ಸಹಜವೆನಿಸುತ್ತಾಳೆ; ಹಾಗೂ ಆರೋಗ್ಯಕರ ಸೃಷ್ಟಿಯೆನಿಸುತ್ತಾಳೆ. ●

ಗಾಢ ದ್ರವವನ್ನು ತಿರುವಿ, ತಿರುವಿ ನಂತರ ಸೋಸುತ್ತಿದ್ದರು. ಸೋಸಿ ಶುದ್ಧೀಕರಿಸಿದ ದ್ರವದ ಪ್ರತಿ ಹನಿಯನ್ನೂ ಅತ್ಯಂತ ಜಾಗರೂಕವಾಗಿ ಕಾದಿರಿಸಿದರು. ಹೊಗೆ ತುಂಬಿ ಉಸಿರು ಕಟ್ಟುವಂತಹ ಪರಿಸ್ಥಿತಿಯಾದಾಗ ಹಿತ್ತಲ ಆವರಣಕ್ಕೆ ತಮ್ಮ ಒಲೆ ಬಾಣಲೆಗಳ ವರ್ಗಾಯಿಸಿದ್ದಾಯಿತು. ಇಷ್ಟೆಲ್ಲ ಬೆನ್ನು ಮುರಿವ ಕೆಲಸವನ್ನು ಬಿಡದೆ ಮುಂದುವರೆಸಿದರು. 1896ರ ಚಳಿಗಾಲ, ದಂಪತಿಗಳು ಬಿಡುವಿಲ್ಲದೇ ದುಡಿದೇ ದುಡಿದರು. ಮೇರಿ ನ್ಯುಮೋನಿಯದಿಂದ ಹಾಸಿಗೆ ಹಿಡಿದದ್ದಾಯಿತು. ಪಿಯರಿ ಕೊಳಕು ಬಾಣಲೆಯ ಕುದಿಸುತ್ತಲೇ ಇದ್ದ. ಮೂರು ತಿಂಗಳ ಕಾಯಿಲೆಯ ನಂತರ ಮೇರಿ ಮತ್ತೆ ಒಲೆ, ಬಾಣಲೆಗೆ ಹಿಂತಿರುಗಿದಳು.

1897ರ ಸೆಪ್ಟಂಬರ್ ತಿಂಗಳು. ಇನ್ನೂ ಕೊಳಕು ಪಿಚ್‌ಬ್ಲೆಂಡ್‌ನ ಪರಿಷ್ಕರಣೆ, ಶುದ್ಧೀಕರಣ ನಡೆದೇ ಇತ್ತು. ಮೇರಿ ಇದೇ ಹೊತ್ತು ಮಗಳು ಐರೀನ್‌ಗೆ ಜನ್ಮವಿತ್ತಳು. ಹಾಸಿಗೆಯಲ್ಲಿ ಮಲಗಿದ್ದಂತೆ ಚಿಂತಿಸಿದ್ದ ಯೋಜನೆಯ ಕಾರ್ಯರೂಪಕ್ಕಿಳಿಸಲು, ಒಂದೇ ವಾರದಲ್ಲಿ ಮೇರಿ ಪ್ರಯೋಗಾಲಯಕ್ಕೆ ಹಿಂತಿರುಗಿದಳು. ಅದೇ ಹೊತ್ತಿಗೆ ತಾತಾ ಕ್ಯೂರಿಯ ಹೆಂಡತಿ ಅಗಲಿ, ಇವರೊಡನೆ ಬಂದುಳಿಯ ಬೇಕಾಯಿತು. ಏಕಾಂಗಿ ಅಜ್ಜನಿಗೆ ಮೊಮ್ಮಗಳ ಪೋಷಣೆ ಖುಷಿಯ ಅನುಭವವಾಯಿತು.

ಮೇರಿ ಪಿಚ್‌ಬ್ಲೆಂಡ್ ಶುದ್ಧೀಕರಣಕ್ಕೆ ಹಿಂತಿರುಗಿದಳು. ಎರಡು ವರ್ಷದ ಕಟು ಪರಿಶ್ರಮದ ಫಲಿತಾಂಶವಾಗಿ ಕೊಂಚವೇ ಕೊಂಚ ಬಿಸ್ಮತ್ ಸಂಯುಕ್ತ ದೊರಕಿತ್ತು. ಆದರೆ ಈ ಬಿಸ್ಮತ್ ಕಾಪೌಂಡ್, ಯುರೇನಿಯಂಗಿಂತ ಮುನ್ನೂರು ಪಾಲು ಹೆಚ್ಚು ಪ್ರಖರವಿತ್ತು. ಛಾಯಚಿತ್ರ ಗ್ರಹಣ ಕಾಗದದ ಮೇಲೆ ಆಶ್ಚರ್ಯ ಜನಕವಾಗಿ ಕೆಲಸ ಮಾಡುತ್ತಿತ್ತು. ಇದರಿಂದಲೇ ಬಿಸ್ಮತ್ ಸಂಯುಕ್ತದಲ್ಲಿ ಗೊತ್ತಿದ್ದ ಮೂಲಧಾತುಗಳ ಹೊರತಾಗಿ ಹೊಸದೇನೋ ಇರಬೇಕೆಂಬ ಅನುಮಾನ ಗಟ್ಟಿಯಾಯಿತು. ಮೇರಿ ಮತ್ತೆ ಈ ಹೊಸ ಮೂಲಧಾತುವಿನ ಶೋಧನೆಗೆ ಪ್ರಯೋಗಾಲಯಕ್ಕೆ ಪ್ರವೇಶಿಸಿದಳು.

1898ರ ಜುಲೈ ತಿಂಗಳು ಮೇರಿ ಕಂಡು ಹಿಡಿದ ಹೊಸ ಮೂಲಧಾತುವನ್ನು ಜಗತ್ತಿಗೆ ತಿಳಿಸಿದಳು. ಅದಕ್ಕೆ ತಾ ಹುಟ್ಟಿದ ದೇಶದ ಹೆಸರಿಟ್ಟು 'ಪೊಲೋನಿಯಮ್' ಎಂದು ಕರೆದಳು. ಆದರೂ ಕ್ಯೂರಿ ದಂಪತಿಗಳು ತೃಪ್ತರಾಗಿರಲಿಲ್ಲ. ಕಾರಣ ಪೊಲೋನಿಯಮ್‌ನ್ನು ತೆಗೆದ ನಂತರವೂ ಉಳಿದ ವಸ್ತು ಪೆಲೋನಿಯಮ್‌ಗಿಂತ ಹೆಚ್ಚು ಶಕ್ತಿಯುತವಾಗಿತ್ತು. ಮತ್ತೇನೋ ವಸ್ತು ಅಗೋಚರವಾಗಿಯೇ ಉಳಿದಿತ್ತು. ಮತ್ತೆ ಶುದ್ಧೀಕರಣ, ಹರಳು ಮಾಡುವ ವಿಧಾನ ಮುಂದುವರೆಯಿತು. ಕಟ್ಟ ಕಡೆಗೆ ಮತ್ತೊಂದು ಹೊಸ ಮೂಲಧಾತು ಹೊರಬಂದಿತು. ಕೆಲವೇ ಕೆಲವು ಹರಳುಗಳು ಸಂಯುಕ್ತ ರೂಪದಲ್ಲಿ ಉಳಿದಿದ್ದವು. ಈ ಹೊಸ ಮೂಲಧಾತುವನ್ನು 'ರೇಡಿಯಂ' ಎಂದು ಕರೆದರು.

'ರೇಡಿಯಂ' ವಿಚಿತ್ರ ಬಗೆಯ ಮೂಲಧಾತು, ಅದು ಯುರೇನಿಯಮ್‌ಗಿಂತ ಲಕ್ಷಪಟ್ಟು ಹೆಚ್ಚು ವಿಕಿರಣ ಶಕ್ತಿಯುಳ್ಳದ್ದು, ಬೆಳಕಿಗೆ ಅತಿಸೂಕ್ಷ್ಮವಾದ ಯಾವುದೇ ವಸ್ತುವನ್ನು ರೇಡಿಯಂ, ಬದಲಿಸುತ್ತದೆ. ಬೆಳಕನ್ನು ತಡೆಹಿಡಿವ ದಪ್ಪ ದಪ್ಪ ಕಾಗದಗಳಲ್ಲಿ ಸುತ್ತಿಟ್ಟ ಛಾಯಾ ಚಿತ್ರಗ್ರಹಣ ಕಾಗದದ ಮೇಲೂ ತೀವ್ರವಾಗಿ ಕೆಲಸ ಮಾಡುತ್ತದೆ. ರೇಡಿಯಂ ಗಾಳಿಯಲ್ಲಿನ ಕಣಗಳ ವಿದ್ಯುತ್ ವಿದ್ಯುತ್‌ವಾಹಿ ಕಣಗಳಾಗಿ ಬೇರ್ಪಡಿಸಬಲ್ಲದು. ಅಂದರೆ ಯಾವುದೇ ಅನಿಲವನ್ನು ವಿದ್ಯುತ್ ವಾಹಕವಾಗಿಸಬಲ್ಲದು. ರೇಡಿಯಂ ಬೇರೆ ಸಂಯುಕ್ತ ಪದಾರ್ಥಗಳೊಡನೆ ಮಿಶ್ರಣಗೊಂಡಾಗ ಅಗೋಚರ ಕಿರಣ ಸ್ಫುರಣವಾಗುತ್ತದೆ. (Fluorescence) ಫ್ಲೋರೆಸೆನ್ಸ್ ಎಂದರೆ ಅಗೋಚರವಾದ ನೇರಿಲೇತೀತ ವರ್ಣಕಿರಣಗಳನ್ನು ದೃಗ್ಗೋಚರ ಮಾಡುವ ಗುಣ. ಕತ್ತಲಲ್ಲಿ ಹೊಳೆವ ಗಡಿಯಾರದ ಮುಳ್ಳುಗಳು ರೇಡಿಯಂ ಲೇಪ ಪಡೆದವಾಗಿವೆ. ರೇಡಿಯಂ, ಬೀಜಗಳನ್ನು ಮೊಳೆಯದಂತೆ ತಡೆಯಬಲ್ಲದು, ಬ್ಯಾಕ್ಟೀರಿಯಾಗಳ ಕೊಲ್ಲಬಲ್ಲದು, ಸಣ್ಣ ಪುಟ್ಟ ಪ್ರಾಣಿಗಳು ಇದರ ಪ್ರಖರತೆಗೆಸಾಯಬಲ್ಲವು.

ಈ ವಿಕಿರಣಶಕ್ತಿ ಅಂಗಾಂಶಗಳ ನಾಶಪಡಿಸುತ್ತದೆ. ಇದೇ ಕಾರಣಕ್ಕೆ ಕ್ಯಾನ್ಸರ್‌ನ ಚಿಕಿತ್ಸೆಗೆ ಬಳಸಲಾಗುತ್ತಿದೆ. ಹಲವು ಚರ್ಮರೋಗಗಳ ವಾಸಿಮಾಡುವಲ್ಲೂ ಉಪಯೋಗಿಸಲಾಗುತ್ತಿದೆ. ರೇಡಿಯಂ ಸತತವಾಗಿ ಶಾಖವನ್ನು ಹೊರ ಹಾಕುತ್ತದೆ. ಶಾಖದ ಮೂಲಕ ಹೊರ ಹೊಮ್ಮುತ್ತ ರೇಡಿಯಂ ನಶಿಸಿ ಸರಳೀಕೃತ ಪರ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ ಬೆಂಗಳೂರು

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಅಧ್ಯಯನ ಕೇಂದ್ರವು ಕೆಲವೊಂದು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

- **ಲೇಖನ ಸ್ಪರ್ಧೆ :** ಕಾಲೇಜು ವಿದ್ಯಾರ್ಥಿ/ವಿದ್ಯಾರ್ಥಿನಿಯರು ಹಾಗೂ ಆಸಕ್ತ ಸ್ತ್ರೀ/ಪುರುಷರು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಸ್ಪರ್ಧೆಗೆ ಪ್ರವೇಶ ಶುಲ್ಕವಿಲ್ಲ. ಸ್ಪರ್ಧೆಯ ಅವಧಿ ಒಂದು ಗಂಟೆ. ಈ ಕೆಳಗಿನ ಯಾವುದೇ ಒಂದು ವಿಷಯವನ್ನು ಕುರಿತಂತೆ ಲೇಖನವನ್ನು ಬರೆಯಬಹುದು. ಬಹುಮಾನಿತ ಲೇಖನಗಳನ್ನು ನಮ್ಮ ಕೇಂದ್ರದ ದ್ವೈಮಾಸಿಕ ಪತ್ರಿಕೆ 'ಅಚಲ'ದಲ್ಲಿ ಪ್ರಕಟಿಸಲಾಗುವುದು.

ವಿಷಯ : 1) ಇಂದಿನ ವಿದ್ಯಾಭ್ಯಾಸ ಪದ್ಧತಿ ಮಹಿಳಾ ವಿಮೋಚನೆಗೆ ಸಹಕಾರಿಯೇ?
2) ಹೆಣ್ಣಿನ ಜೀವನಕ್ಕೆ ವಿವಾಹ ಭದ್ರತೆಯೆ?
3) ಮಹಿಳಾ ಕಲ್ಯಾಣ ಇಲಾಖೆ ಮತ್ತು ಮಹಿಳೆಯರ ಅಭಿವೃದ್ಧಿ.

ಸ್ಪರ್ಧೆಯ ಸಮಯ : 11 ಗಂಟೆ, ದಿನಾಂಕ 25-1-1987

ಸ್ಥಳ : ಕನ್‌ಸ್ಟೂಲ್ ಕಲಾಶಾಲೆ, ಶೇಷಾದ್ರಿಪುರಂ, ಬೆಂಗಳೂರು-20

- **ಕಥೆ ಹಾಗೂ ಕವನ ಸ್ಪರ್ಧೆ :** ಮಹಿಳೆಯನ್ನು ವಸ್ತುವನ್ನಾಗುಳ್ಳ ಕಥೆ ಹಾಗೂ ಕವನಗಳಿಗೆ ಈ ಸ್ಪರ್ಧೆಯಲ್ಲಿ ಆಹ್ವಾನವುಂಟು. ಕಥೆ ಹಾಗೂ ಕವನಗಳನ್ನು ಬರೆದು ನೇರವಾಗಿ ಅಥವಾ ಅಂಚೆಯ ಮೂಲಕವಾದರೂ ಜಾಗೃತಿ ಮಹಿಳಾ ಅಧ್ಯಯನ ಕೇಂದ್ರದ ವಿಳಾಸಕ್ಕೆ ಕಳುಹಿಸಿಕೊಡಬೇಕು. ಬಹುಮಾನಿತ ಕಥೆ/ಕವನಗಳನ್ನು 'ಅಚಲ' ದ್ವೈಮಾಸಿಕದಲ್ಲಿ ಪ್ರಕಟಿಸಲಾಗುವುದು. ಸ್ಪರ್ಧೆಗೆ ಕಥೆ ಹಾಗೂ ಕವನಗಳನ್ನು ಕಳುಹಿಸಲು ಕಡೆಯ ದಿನಾಂಕ 1-2-1987

ಈ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ಮಾರ್ಚ್ 8, ಅಂತರರಾಷ್ಟ್ರೀಯ ಮಹಿಳಾದಿನದಂದು ನಡೆಯುವ ಸಮಾರಂಭದಲ್ಲಿ ನೀಡಲಾಗುವುದು.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :

ಕಾರ್ಯದರ್ಶಿ
ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
221, 4ನೇ ಮೈನ್, ಮೈಯಾಳಕಾವಲ್
ಬೆಂಗಳೂರು-3

"ಅಚಲ" ಚಂದಾದಾರರಾಗಿ

ನಿಮ್ಮ ಸಂಗಾತಿಗಳನ್ನೂ

ಚಂದಾದಾರರನ್ನಾಗಿ ಮಾಡಿ

BOOK POST

If undelivered Please Return to
Jagruthi Mahila Adhyayana Kendra
221, IV Main Road, Vyalikaval,
Bangalore-560 003.